# SWAROOPA NATIONAL DEVELOPMENT EDUCATION 10x10

FIRST STEP

ONE SCHOOL

## ONE TEACHER TEN STUDENTS

## This M'luru girl rewrites record books with both hands

MANGALURU, DHNS


A multi-talented girl who has the ability to write English words using both her hands won Lata Foundation's Exclusive World Record (EWR).

Aadi Swaroopa can write 45 words in one minute using both the left and right hands.

Aadi, daughter of Gopadkar and Sumadkar of Swaroopa Adhyayana Kendra in Mangaluru, begun writing using both her hands two and a half years ago. She can write in 10 different styles using her both hands.

Gopadkar, highlighting her achievements, said she can write unidirectional, opposite direction, right-hand speed, left-hand speed, reverse running, mirror image, dancing and blindfolded, hetero-topic and others.

Aadi, who is into informal schooling, said she had achieved more than what students achieved with help of formal education.



Aadi Swaroopa demonstrates her skill of writing using both hands.

Besides being ambidextrous, Aadi also pursues literary activities, music, Yakshagana, drawing, mimicry, beatboxing, memory exhibition, among others.

She is also learning guitar and keyboard. She is now writing a fantasy novel in English.

Aadi will celebrate her 16th birthday on September 15 and the record is a gift for her birthday, said Gopadkar.

"Writing in both hands will help in activating both the sides of the brain scientifically," he said.

A multi-talented Adi Swaroopa has been engaged in self-learning at Swaroopa Shikshana Adhyayana Kendra.

### Aadi and SSLC examinations

Aadi Swaroopa, a product of informal schooling, will be writing her SSLC examinations in 2021. Gopadkar said Aadi hopes to submit the answer scripts in record time by answering the questions in both left and right hands.

She had learnt to read wher she was one and a half year old and could write at least 3 pages when she was two and half years old.

She is learning Hindustan music under Pandit Ravikiran She has presented more thar 50 Yakshagana shows. She als has a collection of stories and held a solo painting exhibitio in Mangaluru recently.

Now, she is getting ready t create a record of memorising over 1,000 items in four to fiv seconds.



ಪರ್ಯಾಯ
ಪರಿಹಾರ
ಸಹಕಾರಕ್ಕೆ...

## SWAROOPA STUDY TOUR

## ನಾವು ಹೊರಟೆವು...

Watch YouTube

- Swaroopa Study Tour
- Swaroopa Adhyayana Kendra
- Aadi Swaroopa
- Gopadkar


**Swaroopa Adhyayana Kendra (R)**

Kodialbail, Mangaluru. 9845203472, 9901638372


www.swaroopaadhyayanakendra.com

Email : swarooparesearchcenter@gmail.com


## ಇದು ಅದಲ್ಲ

ಬನ್ನೀ......ಬನ್ನೀ....
ಒಳಗೆ ಬನ್ನಿ
ಸ್ವ-ರೂಪದೊಳಗೆ

# ಇದು ಅದಲ್ಲಾ....



ಅಂತ....ಒಪ್ಪಿಕೊಳ್ಳಿ
ಆರಾಮದಲ್ಲಿ
ತಿಳಿದುಕೊಳ್ಳಿ

## ಒತ್ತಾಯವಿಲ್ಲ
## ಒತ್ತಡವಿಲ್ಲ

## ಮಕ್ಕಳು ಯಾರೂ ಸಾಮಾನ್ಯರಲ್ಲ
## ಎಲ್ಲಾ ಮಕ್ಕಳು ಸಮಾನ ಸಾಧಕರು

ಸ್ವರೂಪ
4 ದಶಕಗಳ ಶೋಧನೆಗೆ
ಮನೋವಿಜ್ಞಾನ ಶಕ್ತಿ ಇದೆ
ತತ್ವ ಸಿದ್ಧಾಂತವಿದೆ
ಪ್ರಾಯೋಗಿಕ ಸತ್ಯವಿದೆ
ವೈಜ್ಞಾನಿಕ ಆಧಾರವಿದೆ

ನಾವು ಹಿರಿಯರು... ಅರಿವಿಗೆ ಬಾರದೆ ಪಡಕೊಳ್ಳದೆ ಕಳಕೊಂಡದ್ದು
ನಮ್ಮ ಮಕ್ಕಳ ಪಾಲಾಗದಿರಲಿ....ಮುಂದಿನ ತಲೆಮಾರಿಗೆ
ಸ್ವರೂಪ ಸಾಧಕರೇ ಕಾಣಲಿ
ಯಾಕಾಗಲ್ಲ.



ಸ್ವರೂಪದ ಶಿಕ್ಷಣ ಮತ್ತು ಯೋಜನೆ ಪ್ಲಾನಿಂಗ್‌ನಲ್ಲಿ ಸ್ಪಷ್ಟತೆ ಇದೆ. ಮಕ್ಕಳು ಕಳಕೊಂಡ ಸಾಮರ್ಥ್ಯ ಮತ್ತೆ ಗಳಸಿಕೊಳ್ತಾರೆ ಅನ್ನೋ ನಂಬಿಕೆ ಸ್ವರೂಪ ಶಿಕ್ಷಣದಿಂದ ಎಲ್ಲರಿಗೂ ಸಿಗಲಿದೆ. ನನ್ನ ಮಗಳು ಇದೀಗ ಸ್ವರೂಪದಲ್ಲೇ ಕಲಿಕೆ ಸಾಧನೆಯಲ್ಲಿದ್ದಾರೆ.

**ಸುರೇಶ್ ಬೆಂಗಳೂರು, ಪೋಷಕರು**

# ಕರೆದುಕೊಂಡು ಹೋಗುವುದು ಅಂದರೇನು?

## ಉದ್ದೇಶ

## SWAROOPA STUDY TOUR

ಇಂದಿನ ಕೇವಲ..........

**ಸರ್ಟಿಫಿಕೇಟ್ ಶಿಕ್ಷಣವು ಪರ್ಯಾಯವನ್ನು ಬೇಡುತ್ತಿದೆ.**

ಎಲ್ಲರೂ ಪ್ರತಿಭೆ, ಸಾಮರ್ಥ್ಯ ಹೆಚ್ಚಿಸಿಕೊಳ್ಳುವ ಸಾಧ್ಯತೆಯ ಸ್ವರೂಪ ಶಿಕ್ಷಣ ಇದಾಗಿದೆ.

**ಮಕ್ಕಳು ಯಾರ ಜೊತೆಗೆ ಇದ್ದರೆ ಸರಿ .....?**

**ಅನ್ನೋ ತೀರ್ಮಾನಕ್ಕೆ ಇಲ್ಲಿ ಸಂಪೂರ್ಣ ಉತ್ತರವಿದೆ ....ಆಧಾರವಿದೆ. ಸಹಕಾರ ಮತ್ತು ತರಬೇತಿಗಳು ಸಿಗಲಿದೆ..**

ಸ್ವರೂಪ ಅಧ್ಯಯನ ಕೇಂದ್ರದಲ್ಲಿ ಕಳೆದ ನಾಲ್ಕು ದಶಕಗಳಿಂದ ಗೋಪಾಡ್ಕರ್ ನಡೆಸಿದ ಶೋಧನೆಯಿಂದ ಸಿಕ್ಕಿದ ಫಲ- ಎಲ್ಲಾ ಮಗು GENIUS, ಎಲ್ಲಾ ಮಕ್ಕಳು EXTRORDINARY ಆಗಿರಲೇಬೇಕಾಗಿದೆ... ಅನ್ನೋ ಪ್ರಶ್ನೆಗಳಿಗೆ ಸಿಕ್ಕಿದ ಉತ್ತರ ಮತ್ತು ಆಧಾರ ಇದಾಗಿದೆ. ತಾತ್ಕಾಲಿಕ ಫಲಿತಾಂಶದ ಪರೀಕ್ಷೆ ಅಂಕಗಳಾಗಿರುವ ಉರು ಹೊಡೆವ ವ್ಯರ್ಥ ಅವಧಿಗಳಿಂದಾಗಿ ಈ ಶಿಕ್ಷಣ ಕ್ರಮಗಳಿಂದಾಗಿ ಮಕ್ಕಳಲ್ಲಿ ಸ್ವೀಕಾರ ಸಾಮರ್ಥ್ಯ, ಪ್ರತಿಭೆಗಳು ಇಲ್ಲದೆ ವಂಚಿತರಾಗಿದ್ದಾರೆ....ಅನ್ನೋದೇನೋ ಯಾರಿಗೂ ತಿಳಿದಿರದ ವಿಚಾರವಲ್ಲ. “ಮಕ್ಕಳಲ್ಲಿ ಸುಪ್ತ ಪ್ರತಿಭೆ ಅಡಗಿದೆ. ಅದನ್ನು ಹೊರ ತೆಗೆಯಬೇಕು” ...ಅನ್ನೋ ಮಾತುಗಳು ಭಾಷಣಕಾರರ ಬಾಯಲ್ಲಿ ಮಾತ್ರ ಅಡಗಿದೆ.ಇದುವರೆಗೆ ಬಂದಿರುವ 22ಕ್ಕೂ ಹೆಚ್ಚಿನ ಶಿಕ್ಷಣ ಯೋಜನೆಗಳು ಚೆನ್ನಾಗಿಯೇ ಇದೆ. ಆದರೆ ಅವನ್ನು ಕಾರ್ಯಗತಗೊಳಿಸುವಲ್ಲಿ ಯಾರದೋ ಇಚ್ಛಾಶಕ್ತಿ ಹಾಗೂ ವ್ಯವಸ್ಥೆಗಳು ವಿಫಲವಾಗಿದೆ....ಅನ್ನೋದೂ ಎಲ್ಲರಿಗೂ ತಿಳಿದಿರುವ ವಿಚಾರವೇ ಆಗಿದೆ – ಸ್ವರೂಪ STUDY TOUR ಇದೀಗ ಎಲ್ಲದಕ್ಕೂ **ಪರ್ಯಾಯ** ಮತ್ತು **ಪರಿಹಾರ**ವಾಗಲಿದೆ.

**ಹಲವಾರು ಪ್ರತಿಭೆಗಳು ವಿಶೇಷ ಆಸಕ್ತಿ ಕಲಿಕೆಗೆ ಕಾರಣಗಳು, ಸಾಧನೆ, ಶೋಧನೆ, ಕಡೆಗೆ ನಿತ್ಯ ಬೆಳವಣಿಗೆಯ ನಿತ್ಯ ಪ್ರದರ್ಶನದ ಕಡೆಗೆ**

**ಕರೆದುಕೊಂಡು ಹೋಗುವ**

**SWAROOPA STUDY TOUR**

**ಉದ್ದೇಶವಾಗಿದೆ**

ಶಿಕ್ಷಕ ಬದಲಾಗದೆ ಶಿಕ್ಷಣ ಬದಲಾಗಲ್ಲ... ಪಠ್ಯ ಪೋರ್ಷನ್ ಪರೀಕ್ಷೆ ಪೋಷಕರ ಕೇವಲ ಅಂಕಗಳ ಬೇಡಿಕೆಎಂಬ ರೆಡಿಮೇಡ್ ವಿಷಯಗಳ ಒಳಗೆ ಮಕ್ಕಳನ್ನು ಶಿಕ್ಷಕರನ್ನು ಸಾಧನೆ, ಸಾಮರ್ಥ್ಯ ಪ್ರತಿಭೆ ಇಲ್ಲದಂತೆ ವ್ಯವಸ್ಥೆ ಬಹುಪಾಲು ಬಂಧಿಸಿದೆ.... ಬಿಡುಗಡೆಯ ಅಗತ್ಯವಿದೆ.

**MEMORY DEVELOPMENT, BRAIN SKILL DEVELOPMENT**ಗೆ ಸಂಬಂಧಪಟ್ಟ ಹತ್ತು ಹಲವು ವಿಷಯಗಳಲ್ಲಿ ತೆಗೆದುಕೊಳ್ಳುವ (ಒಪ್ಪಿಕೊಳ್ಳುವ, ಪ್ರಶ್ನಿಸುವ) ಸ್ವೀಕಾರ ಸಾಮರ್ಥ್ಯ ಮುಂತಾದ ಹತ್ತು ಹಲವು ಗುಣಗಳ ಹಸ್ತಾಂತರ ಮಾಡುವುದು. ನಿತ್ಯ ಕಲಿಕಾ ಬೆಳವಣಿಗೆ ಪ್ರದರ್ಶನದ ತರಬೇತಿಗೆ ಆಸಕ್ತ ಶಿಕ್ಷಕರನ್ನು ಆಯ್ಕೆ ಮಾಡುಲಾಗುವುದು. ಮೊದಲಿಗೆ ಜಿಲ್ಲೆಯ ಪ್ರತೀ ತಾಲೂಕಿನ ಖಾಸಗಿ, ಅನುದಾನಿತ, ಸರಕಾರಿ ಶಾಲೆಯ ಕನಿಷ್ಠ 10 ಶಿಕ್ಷಕರು ಹಾಗೂ ಒಪ್ಪಿಕೊಂಡು, ಬದಲಾದ ಖುಷಿಯ ವಿಷಯದೊಳಗೆ ಪಾಲ್ಗೊಳ್ಳುವ ಮನಸ್ಸಿನ ಹತ್ತು ವಿದ್ಯಾರ್ಥಿಗಳನ್ನು ಈ ಸ್ವರೂಪ ಸ್ಟಡಿ **STUDY TOUR**ಗೆ ಆಯ್ಕೆ ಮಾಡಿಕೊಳ್ಳುವುದು. (ಒಂದೇ ತರಗತಿಯಿಂದ ಅಥವಾ ಒಟ್ಟೂ ಶಾಲೆಯ 4ನೇ ತರಗತಿಯಿಂದ 10ನೇ ತರಗತಿವರೆಗಿನ ಒಟ್ಟು 10 ಮಂದಿ) ಶಿಕ್ಷಕರು ತಮ್ಮ ತಮ್ಮ ಆಸಕ್ತಿಯ ಕಲಿಕೆ, ಪ್ರತಿಭೆ ಸಾಮರ್ಥ್ಯದ ಕಡೆಗೆ ಕರೆದುಕೊಂಡು ಹೋಗುವುದು. ಯಾವುದೇ ಒತ್ತಡ ಒತ್ತಾಯವಿಲ್ಲದೆ ಸ್ವ-ಇಚ್ಛೆಯಿಂದ ಶಿಕ್ಷಕರು ಮಕ್ಕಳು ಪಾಲ್ಗೊಳ್ಳುವುದೇ ಸಂಭ್ರಮದ ಸ್ವರೂಪ ಶಿಕ್ಷಣವಾಗಲಿದೆ **“ಇದು ಅದಲ್ಲಾ”**

ಸ್ವರೂಪ ಶಿಕ್ಷಣ ಸಾಧ್ಯತೆ ಯಾರ ಮುಂದೆಯೂ ನೇರ ಹೇಳಿಕೊಳ್ಳಲು ಸಿಗುವ ಆಧಾರವಿದೆ. ನನ್ನ ಮಗನಲ್ಲಿ ಸಾಮರ್ಥ್ಯ ಹೆಚ್ಚಾಗಿದೆ. ಇದೀಗ ಅದ್ಭುತ ಪ್ರದರ್ಶನ ಮಾಡುತ್ತಿದ್ದಾನೆ. ಇದು ಇನ್ನಷ್ಟು ಬಹಿರಂಗ ಮಾಧ್ಯಮ ಸುದ್ದಿಯಾಗಲು ಕಾಯುತ್ತಿದ್ದೇನೆ.



ಮಲ್ಲಿಕಾರ್ಜುನ ಬಾಗಿ ವಿಜಯಪುರ

# SWAROOPA ಏನು? ಹಿನ್ನೆಲೆ?

## ಯಾರಿಂದ? ಎಲ್ಲಿ? ಯಾವಾಗ? ಆರಂಭವಾಯಿತು

**ಸ್ವರೂಪ ಅಂದರೆ Self ಸ್ವ-ರೂಪ ಅಧ್ಯಯನ. ಸ್ವರ+ರೂಪ-ಸ್ವರೂಪ=Voice & Expression ಮೂಲಕ ಪ್ರತೀ ಮಗುವೂ ಜೀನಿಯಸ್ ಎಲ್ಲಾ ಮಕ್ಕಳೂ ಏಕಸ್ಟ್ರಾರ್ಡಿನರಿ ಆಗಲಿದ್ದಾರೆ.1983 ರಿಂದ 1991 ರ ವರೆಗೆ ಹೈಸ್ಕೂಲ್ ಅಧ್ಯಾಪಕ, ಶಿಕ್ಷಕ ತರಬೇತಿ ಸಂಸ್ಥೆಯ DIET ಕಲಾಶಿಕ್ಷಕನಾಗಿ ವೃತ್ತಿಯಿಂದ ಗೋಪಾಡ್ಕರ್ ಪಡೆದುಕೊಂಡ ಪ್ರಾಯೋಗಿಕ ಅನುಭವ ಶಿಕ್ಷಣ ಈ STUDY TOUR ನಲ್ಲಿದೆ. ಮುಂದುವರಿದ ಸ್ವರೂಪ ಶಿಕ್ಷಣ ಕಳೆದ 40 ವರ್ಷಗಳಿಂದ ನಿರಂತರ ಶಿಕ್ಷಣ ಅಧ್ಯಯನದಲ್ಲಿ ತೊಡಗಿಸಿಕೊಂಡು ಪ್ರಾಯೋಗಿಕವಾಗಿ ಪ್ರದರ್ಶನದೊಂದಿಗೆ ಉತ್ತಮ ಫಲಿತಾಂಶ ತೋರಿಸಿಕೊಟ್ಟಿದೆ. ಸ್ವರೂಪ ಅಧ್ಯಯನ ಕೇಂದ್ರದ ಗೋಪಾಡ್ಕರ್ ಮತ್ತು ಸುಮಾಡ್ಕರ್‌ರಿಂದ ಇದೀಗ Sawaroopa National Development Education ಯೋಜನೆ ದೇಶಕ್ಕೆ ಅತೀ ದೊಡ್ಡ ಕೊಡುಗೆಯಾಗಲಿದೆ. ಇದಕ್ಕೆ 8 ವಿಶ್ವದಾಖಲೆ ಮಾಡಿದ ಗೋಪಾಡ್ಕರ್, ಸುಮಾಡ್ಕರ್ ಮಗಳು ಆದಿ ಸ್ವರೂಪ ಮಾದರಿಯಾಗುತ್ತಾಳೆ.**

1991 ರಿಂದ ಮಂಗಳೂರಿನ ಶಿಕ್ಷಕ ತರಬೇತಿ ಸಂಸ್ಥೆ(DIET) ಹಳೆ ವಿದ್ಯಾರ್ಥಿಗಳಿಗೆ ಆರಂಭಿಸಿದ ಸ್ವರೂಪ ಅಧ್ಯಯನ ಸಮೂಹ ಮತ್ತು 1993 ರಿಂದ ಮಂಗಳೂರಿನ ಕುಂಜತ್ತಬೈಲಿನಲ್ಲಿ **ಆರಂಭಿಸಿದ ಸ್ವರೂಪ ವಠಾರದಲ್ಲಿ** ಶಿಕ್ಷಕ ವಿದ್ಯಾರ್ಥಿಗಳೊಂದಿಗೆ 18 ವರ್ಷ ಮಕ್ಕಳಿಗಾಗಿ, **ಶಿಕ್ಷಕರಿಗಾಗಿ** ನಡೆಸಿದ ಶಿಕ್ಷಣ ಪ್ರಯೋಗದ ಅನುಭವವೂ ಇದಕ್ಕೆ ಆಧಾರವಾಗಿದೆ. ಸ್ವರೂಪ ಶಿಕ್ಷಣ ಚಟುವಟಿಕೆಗಳು ಪ್ರಾಯೋಗಿಕವಾಗಿ ಎಲ್ಲವೂ ಅನುಭವಶಿಕ್ಷಣ ಆಧಾರಿತವಾಗಿಯೇ ರೂಪುಗೊಂಡಿತು. 2010 ರಿಂದ ನಗರಕ್ಕೆ ಬಂದು ಮಂಗಳೂರಿನ ಕೊಡಿಯಾಲಬೈಲಿನಲ್ಲಿ **ಸ್ವರೂಪ ಅಧ್ಯಯನ ಕೇಂದ್ರವೆಂಬ ಅನೌಪಚಾರಿಕ ಶಾಲೆ** (Swaroopa Education Research Centre) ನಡೆಸಿ ನೂರಾರು ಮಕ್ಕಳನ್ನು ಮಾದರಿಯಾಗಿಸಿ 10 ವರ್ಷಗಳ ಕಾಲ ನಿರಂತರ "ಶಿಕ್ಷಣ ಜಾಗೃತಿ ಜಾಥಾ" ದ ಮೂಲಕ ದೇಶದಾದ್ಯಂತ 1600 ಪ್ರದರ್ಶನಗಳನ್ನು ನೀಡಿ (35 ಮಕ್ಕಳು ಮತ್ತು 6 ಶಿಕ್ಷಕರು ಪೋಷಕರನ್ನು ಸೇರಿಸಿ ವರ್ಷಕ್ಕೆ 90 ದಿನಗಳು ಬಸ್ಸ್‌ನಲ್ಲಿ ಪ್ರವಾಸ) 6 ಲಕ್ಷಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು, ಶಿಕ್ಷಕರು, ಪೋಷಕರನ್ನು ಜಾಗೃತಿಗೊಳಿಸಿ ಯಶಸ್ಸು ಕಂಡಿದೆ. ರಾಜ್ಯದಾದ್ಯಂತ 1600 ಕ್ಕಿಂತಲೂ ಹೆಚ್ಚು ಶಾಲಾ ಕೇಂದ್ರಗಳಲ್ಲಿ ಗೋಪಾಡ್ಕರ್ ನಡೆಸಿದ ಜಾಥಾ ಮತ್ತು ಸ್ಮರಣ ಶಕ್ತಿವೃದ್ಧಿ, ಬುದ್ಧಿ ಚುರುಕಿಗೆ ಮತ್ತು ರಂಗ ಚಟುವಟಿಕೆ ಶಿಬಿರಗಳು, ಸ್ವರೂಪ ಶಿಕ್ಷಣದ ಅನುಭವದ ಭಾಗವಾಗಿದೆ. ಈ ಎಲ್ಲಾ ಚಟುವಟಿಕೆಗಳ ಜೊತೆಗೆ ಸಾಹಿತಿ, ಯಕ್ಷಗಾನ ಕಲಾವಿದೆ ಸುಮಂಗಲ ವಿಶೇಷವಾಗಿ ಸಹಕಾರ ನೀಡಿದ್ದಾರೆ. ಇದೀಗ ಗೋಪಾಡ್ಕರ್, ಸುಮಾಡ್ಕರ್, ಆದಿಸ್ವರೂಪಳ ಸಂಶೋಧನೆಯ ಮುಂದುವರಿದ ಭಾಗವೇ Swaroopa National Development Education (ಸ್ವರೂಪ ರಾಷ್ಟ್ರೀಯ ಅಭಿವೃದ್ಧಿ ಶಿಕ್ಷಣ) ಇದೀಗ ಮಂಗಳೂರಿನ ಸ್ವರೂಪ ಅಧ್ಯಯನ ಕೇಂದ್ರದಲ್ಲಿ ಆದಿಸ್ವರೂಪಳ ಜೊತೆಗೆ ಸಾಮರ್ಥ್ಯ-ಪ್ರತಿಭೆ ಪ್ರದರ್ಶನ ಆಧಾರಿತ ಸ್ವರೂಪ ಶಿಕ್ಷಣ. Development Education 10x10 ನಿತ್ಯ ಪ್ರದರ್ಶನದ ಮಾದರಿಗೆ 10 ವಿದ್ಯಾರ್ಥಿಗಳು ಸಿದ್ಧರಾಗುತ್ತಿದ್ದಾರೆ. ಇವರೆಲ್ಲರನ್ನೂ ಆದಿ ಕರೆದುಕೊಂಡು ಹೋಗುತ್ತಿದ್ದಾಳೆ. ONE TEACHER 10 STUDENTS ಎಂಬ SWAROOPA STUDY TOURಗೆ ಹಲವು ವಿಶ್ವದಾಖಲೆ ಪಡಕೊಂಡು ಮಕ್ಕಳು ನಿಮ್ಮ ಮುಂದೆ ಮಾದರಿ ಪ್ರದರ್ಶನಕ್ಕೆ ಸಿದ್ಧರಾಗಿದ್ದಾರೆ.

ಆದಿ ಸ್ವರೂಪ
8 ವಿಶ್ವದಾಖಲೆ

**INDIA BOOK OF RECORD**

ಹತ್ತನೇ ತರಗತಿಯ ಹತ್ತು ಪಠ್ಯ ಪುಸ್ತಕಕ್ಕೆ ಒಂದೇ ಚಿತ್ರ



> ಸ್ವರೂಪ ಶಿಕ್ಷಣ ನಾನು ಹತ್ತಿರದಿಂದ ಕಂಡಿದ್ದೇನೆ. ಮಕ್ಕಳಿಗೆ ಅಗತ್ಯ ಬೇಕಾದ ಎಲ್ಲಾ ಶಕ್ತಿ ಸಾಮರ್ಥ್ಯಗಳು ಸ್ವರೂಪ ಶಿಕ್ಷಣದಿಂದ ಸಿಗಲಿದೆ ನಿಜ.



**ದಿನೇಶ್ ಹೊಳ್ಳ, ಪರಿಸರ ಶಿಕ್ಷಣ ಚಿಂತಕರು**

**SWAROOPA AN ALTERNATE COMPOSITE EDUCATION**

# DEVELOPMENT EDUCATION 10X10


**ಇದು ಆಗಬೇಕಾದೆ ಅಲ್ವೇ..?**
ಮೊದಲು ಸಾಧ್ಯ
ಆಗುವವರಿಂದ, ಮತ್ತೆ
ಅವರಿಂದ ಪ್ರೇರಣೆಯಾದ
ಎಲ್ಲರಿಂದ

ಸಂತಸ ಸಂಭ್ರಮದ ಕಲಿಕೆಗಾಗಿ ದೇಶದ ಎಲ್ಲರ ಏಳಿಗೆಗಾಗಿ ಹತ್ತು ವಿಷಯಗಳಲ್ಲಿ ಹತ್ತತ್ತು ವಿಷಯಗಳನ್ನು ಒಳಗೊಂಡ ನಿತ್ಯ ಬೆಳವಣಿಗೆ ಪ್ರದರ್ಶನದ ಯೋಜನೆ, ಮಕ್ಕಳ ಮತ್ತು ಹಿರಿಯರ ಎಲ್ಲರ ವಿಶಿಷ್ಠ ಚಟುವಟಿಕೆ ಇದಾಗಿದೆ. ನಿನ್ನೆಯವರೆಗೆ ಒಬ್ಬ ವಿಧ್ಯಾರ್ಥಿ, ವಿದ್ಯಾರ್ಥಿನಿ, ಒಬ್ಬ ಶಿಕ್ಷಕ, ಶಿಕ್ಷಕಿ ಒಬ್ಬ ಪೋಷಕರ ಕಲಿಕಾ ಸಂಗ್ರಹದ ದಾಖಲೆಯ ಬಹಿರಂಗ ಪ್ರದರ್ಶನ ನಡೆದಿಲ್ಲ. ನಡೆದಿರುವುದಾದರೆ ಇಂದಿನ ಪ್ರದರ್ಶನಕ್ಕೆ ಅದು ಬೆಳವಣಿಗೆ ಕಾಣುತ್ತಿತ್ತು. ಇದು ನಿತ್ಯ **DEVELOPMENT EDUCATION 10X10** ಕಲಿಕೆ ಮೂಲಕ ಪ್ರದರ್ಶನವಾಗಲಿದೆ. ಪಠ್ಯ ಪರೀಕ್ಷೆ ನೆನಪಿನ ಅಂಕಗಳಿಗೆ ಇದು ವಿಶೇಷ ಮಹತ್ವ ಪಡೆದುಕೊಳ್ಳಲಿದೆ.

| | | | |
|---|---|---|---|
| **ಹತ್ತು ವಿಷಯಗಳು** | • ATTITUDE<br>• CREATIVITY<br>• MEMORY SKILLS<br>• LITERATURE<br>• RESEARCH | • SKILL PACKAGE<br>• GENERAL GK PACKAGE<br>• MATHS MENTAL ABILITY | • TALENT<br>• HAND SKILLS PACKAGE<br>• LIFE EXPERIENCE |
| **ಹತ್ತು ಗುಣಗಳು** | • RECEIVING<br>• ETIQUETTE<br>• OPENNESS | • FIRST THOUGHTS<br>• HELPING<br>• LOVE -ENJOYMENTS THOUGHTS | • RESPECT THANKS<br>• TREATMENT<br>• CREATIVITY |
| **10 MEMORY TECHNIQUES 10 BRAINSKILL DEVELOPMENT ACTIVITIES** | | | |

ಕನಿಷ್ಟ 10 ಭಾಷೆಯ ಕಲಿಕೆಗೆ (ಮಾತು, ಬರಹ, ಓದು) ಸರಳ ಸೂತ್ರಗಳ, ಹತ್ತು ಪ್ರತಿಭೆ, ಹತ್ತು ಕೈಕೆಲಸ ಹೀಗೆ ಎಲ್ಲವೂ ಹತ್ತತ್ತು ವಿಷಯಗಳಲ್ಲಿ ಎಲ್ಲರೂ ಅಭ್ಯಾಸಕ್ಕೆ ಬರಲಿದ್ದಾರೆ. ಶಾಲೆಗೆ ಹೋಗುವ ವಿದ್ಯಾರ್ಥಿಗಳಿಗೆ **Study+ knowledge** ಮತ್ತು ಇತರರಿಗೆ **Duty + Knowledge** ಆಗಿ ಪರಿಣಮಿಸಲಿದೆ. ದಿನದ 16 ಗಂಟೆಯ THOUGHTSಗಳನ್ನು ಪೂರ್ಣ ಉತ್ಪಾದನೆಯಾಗಿ ಪರಿವರ್ತಿಸುವುದು ಇಲ್ಲಿ ಮುಖ್ಯವಾಗಿದೆ. ಇವೆಲ್ಲವೂ WWHKST Swaroopa 6 Bankನಲ್ಲಿ ದಾಖಲಾಗಿ ದಾಖಲೆಯ ಪ್ರದರ್ಶನವನ್ನು ಜಗತ್ತು ಕಾಣಲಿದೆ.

ಸ್ವರೂಪ ಶಿಕ್ಷಣ ಮೆಚ್ಚಿದ್ದೇನೆ ಸ್ವರೂಪದ ನೆನಪಿನ ಕಲಿಕಾ ತಂತ್ರಗಳು ಮಕ್ಕಳಿಗೆ ಪರೀಕ್ಷೆಯ ಭಯದಿಂದ ಮುಕ್ತರಾಗಲು ಅಗತ್ಯ ಬೇಕಾದ್ದೇ ಆಗಿದೆ. ಅದ್ಭುತ ಸಾಧ್ಯತೆ



–ಗುರುರಾಜ ವಕೀಲರು –ಬೆಂಗಳೂರು, ಸ್ವರೂಪ ಹಿತೈಷಿಗಳು

**ಶಿಕ್ಷಕರು – ವಿದ್ಯಾರ್ಥಿಗಳಿಗೆ**
**ಸ್ವರೂಪ ಶಿಕ್ಷಣ ತರಬೇತಿ ವಿಷಯಗಳು**

## TRAINING SUBJECTS

CREATIVE ART
10 MEMORY
BRAIN SKILL
10 ACTIVITIES
10 ATTITUDE

**ಬುದ್ಧಿ ಚುರುಕುಗೊಳಿಸುತ್ತಾ**
**ನೆನಪು ಶಕ್ತಿ ಜಾಗೃತಿಗೊಳಿಸುವುದು**
**ಸ್ವಕಲಿಕೆಗೆ ಕಾರಣಗಳನ್ನು ಸೃಷ್ಟಿಸುವುದು.**

**ಮಕ್ಕಳು ಯಾರ ಜೊತೆಗಿರುತ್ತಾರೆ, ಅವರ ಗುಣ ಸಾಮರ್ಥ್ಯಗಳು ಪ್ರತಿಭೆಗಳು ಹೇಗೆ ಮಕ್ಕಳ ಪಾಲಾಗುತ್ತದೆ. ಗುಣ ಹಸ್ತಾಂತರ ಹೇಗೆಂದು ಗಮನಿಸೋಣ.**

ಓದುಗರು, ಬರಹಗಾರರು, ಕಲಿಯುವವರು, ಸಂಶೋಧಕರು, ಕಲಾವಿದರು, ಚಿಂತಕರು, ಜ್ಞಾನಿಗಳು ಮುಂತಾದ ನೂರಾರು ಕ್ಷೇತ್ರದ ಸಾಧಕರ ಜೊತೆಗಿದ್ದಾಗ ಅವರು ಅದೇ ಆಗುತ್ತಾರೆ.

ನಾನು Artist ಆಗಿದ್ದೇನೆ. ಹಾಗಂತ ಅಪ್ಪ Artist ಆಗಿರುವುದಕ್ಕೆ ನಾನು ಆರ್ಟಿಸ್ಟ್ ಆಗಿಲ್ಲ. ಹಾಗಂತ ಅಪ್ಪ Art ಕಲಿಸುವುದೂ ಇಲ್ಲ, **ನಾನು ಇರುವುದು ಚಿತ್ರ ಬರೀತಾ.. ಬರೀತಾ ಇದ್ದು, ಖುಷಿ ಪಡೋ ಅಪ್ಪನ ಜೊತೆಗೆ** ಅಂತ..ಆದಿ ಸ್ವರೂಪ ಸದಾ ಹೇಳುತ್ತಿರುತ್ತಾಳೆ. ಪ್ರತಿಭೆಗಳು ಇರುವವರ ಜೊತೆಗೆ ಮಕ್ಕಳು ಇರಬೇಕೆಂದೇನಲ್ಲ... ಮಕ್ಕಳು ಕಲಿಯುವವರ ಜೊತೆಗಿರಬೇಕು.....**ಏನು ಕಲಿಯುವುದು ?**

### DEVELOPMENT EDUCATION 10X10
**(ಹತ್ತು ವಿಷಯಗಳ ಒಳಗಿನ ಹತ್ತತ್ತು ವಿಷಯಗಳಲ್ಲಿ ನಿತ್ಯ ಕಲಿಕೆ ನಿತ್ಯ ಪ್ರದರ್ಶನ)**

**SWAROOPA MULTI TASK MEMORY EDUCATION–DAILY DEVELOPMENT SHOW**

**ಎಲ್ಲರಲ್ಲೂ ಸಮಾನ ಪ್ರತಿಭೆ, ಸಾಮರ್ಥ್ಯ ಬೆಳೆಸುವುದು. ಇದು SWAROOPA JNANA BHARATHA ಯೋಜನೆಯಾಗಿದೆ.**

### 1. ● SWAROOPA CREATIVE ART-

ತಾಳ್ಮೆ, ಏಕಾಗ್ರತೆ, ಸುಂದರ ಕೈಬರಹ, ಸಮಯದ ಸದುಪಯೋಗ, ಮಲ್ಟಿಟಾಸ್ಕ್, ಮಾತು, ಬರಹಗಾರರು, ಗ್ರಹಿಕೆ, ಚಿಂತನೆ, ಕ್ರಿಯಾಶೀಲತೆ. ಸೃಜನಶೀಲತೆ, ಕಲಾಪ್ರತಿಭೆ ಆಸಕ್ತಿ ಹುಟ್ಟಿಕೊಳ್ಳುವುದಕ್ಕೆ ಕಾರಣರಾಗುವುದರೊಳಗೆ ಮುಂತಾದ ಹತ್ತು ಹಲವು ಲಾಭಗಳಿಗಾಗಿ ಸ್ವರೂಪ ಕ್ರಿಯೇಟಿವ್ ಆರ್ಟ್ ಸಹಾಯ ಮಾಡಲಿದೆ. ಶಾಲೆಗೆ ಅಪರೂಪಕ್ಕೆ ಬರುವ ಅತಿಥಿಗಳಿಂದ ಮಕ್ಕಳು ಹೆಚ್ಚು ಸ್ವೀಕರಿಸುತ್ತಾರೆ. ಸಾಮಾನ್ಯವಾಗಿ ನಿತ್ಯದವರು 'ಸ್ವರಮೌಲ್ಯ' ಸ್ವಲ್ಪ ಕಳಕೊಂಡಿರುತ್ತಾರೆ.

---

### 2. ● MEMORY

ನೆನಪಿಗೆ ನೆನಪೇ ಮುಖ್ಯ.

| |
|---|
| ಎಲ್ಲದಕ್ಕೂ ಮೂಲ ಮಕ್ಕಳ ಪರೀಕ್ಷೆ ಹಿರಿಯರ ಆರೋಗ್ಯ ಜೀವನ, ನೆಮ್ಮದಿ ವ್ಯವಹಾರ ಎಲ್ಲವೂ ನೆನಪೇ ಆಗಿದೆ. ಸ್ವರೂಪದಲ್ಲಿ ಇದು ಮುಖ್ಯವಾಗಿದೆ |

10 MEMORY TECHNIQUES
MEMORY TREATMENT
BASIC MEMORY
MEMORY DEVELOPMENT
MEMORY TALENT- MULTI TASK MEMORY

ಪಾಠ **ಕಾಣುವುದು** ಹೇಗೆ, ಕಂಡದ್ದನ್ನು **ತೆಗೆದುಕೊಳ್ಳುವುದು** ಹೇಗೆ, ತೆಗೆದುಕೊಂಡದ್ದನ್ನು **ಇಟ್ಟುಕೊಳ್ಳುವುದು** ಹೇಗೆ, ಇಟ್ಟುಕೊಂಡ ಮೇಲೆ ಅದನ್ನು **ಅನುಭವಿಸುವುದು** ಅಥವಾ **ತನ್ನದಾಗಿಸಿಕೊಳ್ಳುವುದು** ಮತ್ತು ಅದನ್ನು **ಬಳಕೆ** ಮಾಡುವುದು ಹೇಗೆ ಅನ್ನೋದನ್ನು ತರಬೇತಿಯಿಂದ ಪಡಕೊಳ್ಳುವುದು.

---

### 3 ● 3. BRAIN SKILL DEVELOPMENT ಗೆ ACTIVITIES

Creativity, Literature, Research, GK package, Maths Mental ability, Handskills, Life expereince, WWHKST 6 Banks-ಸ್ವರೂಪ ಶಿಕ್ಷಣದಿಂದ ಹತ್ತಾರು ಚಟುವಟಿಕೆಗಳು ಎಲ್ಲರಲ್ಲೂ ಅದ್ಭುತ ಬದಲಾವಣೆಗೆ ಕಾರಣವಾಗಲಿದೆ. ಗ್ರಹಿಕೆ, ಚಿಂತನೆ, ವಿಚಾರ, ಕ್ರಿಯಾಶೀಲತೆ, ಸೃಜನಶೀಲತೆ, ಮನೋವಿಜ್ಞಾನ. ತತ್ವ ಸಿದ್ಧಾಂತ, ಪ್ರತಿಭೆ ಸಾಮರ್ಥ್ಯಗಳ ಕೊರತೆಗಳನ್ನು ಮತ್ತೆ ಗಳಿಸಲು ಸ್ವರೂಪ study tour ಸಹಾಯ ಮಾಡಲಿದೆ.


All lessons of tenth in one painting...

---

### 4 ● QULAITIES

Receiving ತೆಗೆದುಕೊಳ್ಳುವ ಗುಣ ಅಂದರೆ ಒಪ್ಪಿಕೊಳ್ಳುವ, ಪ್ರಶ್ನಿಸುವ ಅಂದರೆ ಸದಾ ಕೇಳಿ ಕೇಳಿ ತಿಳಿದುಕೊಳ್ಳುವ ಗುಣ ಹಾಗೂ Consciousness, Respect-Thanks, obedience, Alertness, First thoughts, Helping nature, Etiquette, Love -Enjoyments, Treatment.

ಸಾಧಕರಾಗಲು ಮೊದಲ ಆಯ್ಕೆ ಸ್ವರೂಪದ ಅರಿವು. ಇಲ್ಲಿ ಏನನ್ನೂ ಕಲಿಸುವುದಿಲ್ಲ. ಕಲಿಯುವಂತೆ ಮಾಡುವ ಪ್ರಕ್ರಿಯೆ ಬಹಳ ವಿಭಿನ್ನ ಮತ್ತು ಪರಿಣಾಮಕಾರಿ.



-ಮಧುಸೂಧನ ಅಂಬೆಕಲ್ಲು, ಅನ್ವೇಷ್ ಪೋಷಕರು.

# Swaroopa study tourಗೆ One Teacher 10 students

## ಆಯ್ಕೆಯ ಒಬ್ಬ ಶಿಕ್ಷಕ ಯಾರು ? 10 ಮಕ್ಕಳ ಆಯ್ಕೆ ಹೇಗೆ?

## ONE DIST ONE TALUK TEN TEACHERS, 100 STUDENTS-MODEL SHOW

**ಸ್ವರೂಪ ಶಿಕ್ಷಣ ದೇಶದ ಶಿಕ್ಷಣಕ್ಕೊಂದು ವಿನೂತನ ಕೊಡುಗೆ**

**ಸ್ವರೂಪ ತರಬೇತಿಗೆ ಮೊದಲ ಆಯ್ಕೆ**
**ಆಸಕ್ತ ಶಿಕ್ಷಕರು ಯಾರು ? 10 ಮಕ್ಕಳ ಆಯ್ಕೆ ಹೇಗೆ?**

8 ವಿಶ್ವದಾಖಲೆ ಮಾಡಿದ ಆದಿ ಸ್ವರೂಪಳ ಜೊತೆಗೆ ಇದೀಗ ಕಲಿಕೆ ಸಾಧನೆಯಲ್ಲೇ ಸ್ವರೂಪ ಅಧ್ಯಯನ ಕೇಂದ್ರ ಮಂಗಳೂರು ಇಲ್ಲಿನ ವಿಶ್ವದಾಖಲೆ ಮಾಡಿದ 3 ಮಂದಿ ಮತ್ತು 5 ಮಂದಿ ವಿಶ್ವದಾಖಲೆ ಮಾಡುವ ಅಭ್ಯಾಸದಲ್ಲಿರುವವರು 10 ವಿದ್ಯಾರ್ಥಿಗಳು ಸಿದ್ಧರಾಗಿದ್ದಾರೆ. 8,9,10ನೇ ತರಗತಿಯ ವಿದ್ಯಾರ್ಥಿಗಳು, 10 ನೇ ತರಗತಿ Portion ಪೂರ್ಣ ಒಂದೇ ತಿಂಗಳಲ್ಲಿ ಮುಗಿಸಿಕೊಂಡು ನಿತ್ಯ ರಿವಿಜನ್ ಮಾಡುತ್ತಾ ಹಲವು ವಿಶ್ವದಾಖಲೆ ಮಾಡಲಿದ್ದಾರೆ. 8ನೇ ತರಗತಿ ವಿದ್ಯಾರ್ಥಿ 10ನೇ ತರಗತಿಯ **CBSE, ICSE** ಹಾಗೂ **State Syllabus**- ಅಗತ್ಯ ಇದ್ದರೆ ಪೂರ್ಣ ಕಲಿತು ಉತ್ತರಿಸುತ್ತಾನೆ....ಯಾಕಾಗಲ್ಲ? ನಿಮ್ಮ ಊರಿನ ನಿಮ್ಮ ಶಾಲೆಯ ಮಕ್ಕಳಗೂ Portion ಮುಗಿಸಿ ಬೇಗನೆ ನೆನಪಿಟ್ಟಕೊಳ್ಳುವ ತಂತ್ರ ಹೇಳಿಕೊಡುತ್ತಾರೆ. ಅದ್ಭುತ ನೆನಪು ಶಕ್ತಿಯ ಪ್ರತಿಭಾ ಪ್ರದರ್ಶನಕ್ಕೆ ನಿಮ್ಮ ಹತ್ತಿರ ಬರುತ್ತಿದ್ದಾರೆ.

**ನಿಮ್ಮ ಊರಿನ ನಿಮ್ಮ ಶಾಲೆಯ ಒಬ್ಬ ಶಿಕ್ಷಕ 10 ಮಕ್ಕಳ ಜೊತೆಗೆ ಸ್ವರೂಪ ಶಿಕ್ಷಣಕ್ಕೆ ಬನ್ನಿ.**

## ನಮ್ಮ ನಿಮ್ಮ ಮಕ್ಕಳು ದೇಶದ ಎಲ್ಲರೂ ಸಾಧಕರು ಯಾಕಾಗಲ್ಲ.

ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್ ತಿಂಗಳಲ್ಲಿ ರಾಜ್ಯದ ಜಿಲ್ಲಾ ಕೇಂದ್ರಗಳ ಸ್ವರೂಪದ 10 ಸಾಧಕ ಮಕ್ಕಳು ಅದ್ಭುತ ಸ್ಮರಣ ಶಕ್ತಿ ಪ್ರತಿಭೆ ಪ್ರದರ್ಶನ ಮಾಡುತ್ತಾ....ತರಬೇತಿಯನ್ನು ಕೊಡುತ್ತಾರೆ.

## ಇದು ಅದಲ್ಲ

**ಒಬ್ಬ ಶಿಕ್ಷಕ/ಕಿ ಆಯ್ಕೆ :** ವಿಶೇಷ ಕಾಳಜಿಯ ಕನಿಷ್ಠ 10 ಆಸಕ್ತ ಶಿಕ್ಷಕರನ್ನು ಪ್ರತೀ ತಾಲೂಕಿನಿಂದ DDPI ಮೂಲಕ BEOಗಳು ಪ್ರದರ್ಶನ ವೀಕ್ಷಿಸಲು ಮತ್ತು ತರಬೇತಿಗೆ ಕಳುಹಿಸುವಂತೆ ವಿನಂತಿಸಿದ್ದೇವೆ. ಒಂದು ದಿನದ ಪ್ರದರ್ಶನ ತರಬೇತಿಯ ನಂತರ ವಾರಕ್ಕೆ ಒಂದೆರಡು ಗಂಟೆಗಳ ಕಾಲ Online ತರಬೇತಿಗಳೂ ಸಿಗಲಿವೆ.

**10 ವಿದ್ಯಾರ್ಥಿಗಳ ಆಯ್ಕೆ:** ಶಿಕ್ಷಕರ ಆಸಕ್ತಿ, ಕಲಿಕೆ, ಒಪ್ಪಿಕೊಂಡ ಬದಲಾವಣೆ ಸಂತಸ ಕಂಡು ಕೊಂಡ ಮಕ್ಕಳು ತಾವು ತಕ್ಷಣ ಪ್ರತಿಕ್ರಿಯೆ ನೀಡಿ ಅಭ್ಯಾಸಕ್ಕೆ ತೊಡಗಿ ಪ್ರದರ್ಶನ ಮಾಡಿದ 10 ಮಕ್ಕಳನ್ನು ಮೊದಲಿಗೆ ಆಯ್ಕೆ ಮಾಡುವುದು.

**Study tourಗೆ ಹೊರಟ** ಮಕ್ಕಳು ಮತ್ತು ಶಿಕ್ಷಕರ ಆಸಕ್ತಿ ಕಲಿಕೆ ನಿತ್ಯದ ಬೆಳವಣಿಗೆ ಪ್ರದರ್ಶನ, **ನಿತ್ಯ You tube channelಗೆ** ವೀಡಿಯೋ ದಾಖಲೆ ಮಾಡಲಾಗುವುದು.ಅಭಿವೃದ್ಧಿಯ ಪ್ರದರ್ಶನ ನಿತ್ಯ ಕಂಡಲ್ಲಿ ಎಲ್ಲರೂ ಆಶ್ಚರ್ಯದಿಂದ ಹುಬ್ಬೇರಿಸುತ್ತಾರೆ..ಅಲ್ವೇ? ಈ ಮೂಲಕ ಎಲ್ಲಾ ಮಕ್ಕಳು ಪರಿಚಯ ಫಲಿತಾಂಶ ಉನ್ನತ ಮಟ್ಟಕ್ಕೆ ಏರಿಸಲು ಕಡಿಮೆ ಅವಧಿಯ ಅಭ್ಯಾಸದಿಂದಲೇ ಸಾಧಿಸುತ್ತಾರೆ ಮತ್ತು ಹತ್ತು ಹಲವು ವಿಷಯಗಳಲ್ಲಿ ಸಾಧಕರೂ ಆಗುತ್ತಾರೆ. ಜೊತೆಗೆ ಹಲವಾರು ವಿಶ್ವದಾಖಲೆಗಳನ್ನು ಮಾಡಲು ತರಬೇತಿಗಳನ್ನು ಸ್ವರೂಪ ಸಾಧಕರು ಕೊಡುತ್ತಾರೆ.



## ದೇಶದ ಎಲ್ಲಾ ಮಕ್ಕಳೂ ಸಾಧಕರು ಯಾಕಾಗಲ್ಲ?

10 ವರ್ಷಗಳ ಹಿಂದೆನೇ ಸ್ವರೂಪಕ್ಕೆ ಬಂದಿದ್ದರೆ, ಹಲವು ಕ್ಷೇತ್ರಗಳಲ್ಲಿ ದೇಶಕ್ಕೇ ಶ್ರೇಷ್ಠ ಸಾಧಕನಾಗುತ್ತಿದ್ದೆ. ಇಲ್ಲಿ ಆಧಾರ ಸಿಕ್ಕಿದೆ. ಸ್ವರೂಪ ನಿಜ ಸಾಧನೆ-ಶೋಧನೆಯ ಕೇಂದ್ರ, ಕಲಿಯುವುದಕ್ಕೆ ಇಲ್ಲಿ ಸಂಬಳ ತೆಗೆದುಕೊಳ್ಳುತ್ತಿದ್ದೇನೆ. ಕಲಿಸುವುದಕ್ಕಲ್ಲ. ಕಲಿವ ಕಲಿವಂತೆ ಮಾಡುವ, ಮಾದರಿಯಾಗುವ ಶಿಕ್ಷಕರಿಗೆ ಹೆಚ್ಚು ಸಂಬಳ ಸಿಗಬೇಕು.



ಶಿವಲಿಂಗ ಸಂಸ್ಕೃತ ಉಪನ್ಯಾಸಕರು, ಸ್ವರೂಪ ಅಧ್ಯಯನ ಕೇಂದ್ರ

**Interested teachers**

Good service
A lot of pros There are people.
Children are great To be successful They work hard in their dreams.

# ಶಿಕ್ಷಕರಿಗೆ ಮಕ್ಕಳಿಗೆ ತರಬೇತಿ ಎಲ್ಲಿ....?ಹೇಗೆ...?

## ತರಬೇತಿ ವಿಷಯ ಮತ್ತು ಪರಿಕರ ಏನೇನು ಕೊಡಲಾಗುವುದು.

- ಜಿಲ್ಲಾ ಕೇಂದ್ರದಲ್ಲಿ DDPIಯವರು ಅವರು ನಿರ್ಧರಿಸಿದ ಒಂದು ಶಾಲೆಯ್ಲು ಪ್ರತೀ ತಾಲೂಕಿನ ಕನಿಷ್ಠ 10 ಶಿಕ್ಷಕರಿಗೆ ಸ್ವರೂಪದ 10 ಮಕ್ಕಳಿಂದ ಸಾಮರ್ಥ್ಯದ ಪ್ರದರ್ಶನ ಮತ್ತು ತರಬೇತಿ. ಬೆಳಗ್ಗೆ 10 ರಿಂದ 4 ಗಂಟೆಯವರೆಗೆ.
- ಸರಕಾರಿ ಮತ್ತು ಅನುದಾನಿತ, ಖಾಸಗಿ ಶಾಲೆಯಿಂದಲೂ ಆಸಕ್ತ ಶಿಕ್ಷಕರನ್ನು ಸಮಾನವಾಗಿ ಅಹ್ವಾನಿಸಲಾಗುವುದು. ಅವಕಾಶ ಇದ್ದರೆ 10 ಮಕ್ಕಳೂ ಪ್ರದರ್ಶನ ಮತ್ತು ತರಬೇತಿಗೆ ಆ ದಿನವೇ ಭಾಗವಹಿಸಬಹುದು ಅಥವಾ ಶಿಕ್ಷಕರು ಪಡಕೊಂಡ ತರಬೇತಿಯನ್ನು ಅನಂತರ ಮಕ್ಕಳಿಗೆ ಕೊಡಬಹುದು.
- ಅಗತ್ಯವಿದ್ದಷ್ಟು ವಾರದಲ್ಲಿ ಒಂದೆರಡು ದಿನ ಆನ್ಲೈನ್ ನಲ್ಲಿ ತರಬೇತಿ ಕೊಡಲಾಗುವುದು. ಮೊದಲಿಗೆ ಆಯ್ಕೆಯಾದ 10 ಆಸಕ್ತ ಮಕ್ಕಳಿಗೆ ಮಾತ್ರ. ಕಲಿಕೆ, ಸಾಧನೆ, ಬದಲಾವಣೆಗೆ ಒಪ್ಪಿಕೊಂಡವರು ಇಲ್ಲಿ ಬೇಗನೆ ಸಿದ್ಧರಾಗುತ್ತಾರೆ.
- ಏಕಾಗ್ರತೆ, ತಾಳ್ಮೆ, ಬುದ್ಧಿ ಚುರುಕಾಗಲು, ಬುದ್ಧಿ ಬದಲಾಗಲು, ಸಾಧನೆಯ-ಕಲಿಕೆಗೆ, ಮಲ್ಟಿಟಾಸ್ಕ್ ಆಗಿ ಅಭ್ಯಾಸ ಮಾಡಲು ತರಬೇತಿ ಸಿಗಲಿದೆ. Memory Development, Brain Skill development ಮತ್ತು Talentಇಲ್ಲಿ ಮುಖ್ಯ ಫಲಿತಾಂಶವಾಗಲಿದೆ.

**ಇದು ಅದಲ್ಲಾ**

- Memory ಅಭ್ಯಾಸಕ್ಕೆ, 10 ಭಾಷಾ ಅಭ್ಯಾಸಕ್ಕೆ, Creative Artಗೆ ಸ್ವರೂಪ 10 ಸಂಕೇತ ಭಾಷೆ, WWHKST 6 Bank ಗೆ ಪೂರಕ(World Bank, Knowledge Bank) ತರಬೇತಿಗೆ ಮುದ್ರಣ ಪರಿಕರ ಸ್ವರೂಪದಿಂದ ಕೊಡಲಾಗುವುದು.
- ಆಸಕ್ತಿ, ಬೇಡಿಕೆ, ಬೆಳವಣಿಗೆ ಫಲಿತಾಂಶ ಪ್ರದರ್ಶನ ಕಂಡಂತೆ ತರಬೇತಿ ಮತ್ತು ಪೂರಕ ಪರಿಕರಗಳನ್ನು ಒಪ್ಪಂದದಂತೆ ಅಗತ್ಯವಿದ್ದಷ್ಟು ಕೊಡಲಾಗುವುದು.
- ಶಿಕ್ಷಕರು ಮಕ್ಕಳು ಸಾಧಕರಾಗುವುದೇ ಇಲ್ಲಿ ಸ್ವರೂಪ ಅಧ್ಯಯನ ಕೇಂದ್ರ ಬಯಸುವ ಕೊಡುಗೆಯಾಗಿದೆ, ಸಂಭಾವನೆಯಾಗಿದೆ.

**ಉಚಿತ ಪ್ರವೇಶ**

**ಶಿಕ್ಷಕರು ಮಕ್ಕಳ ಆಸಕ್ತಿಯ ಪ್ರದರ್ಶನವೇ ಫೀಸು**


ಆಸಕ್ತಿಯೇ ಫೀಸು, ಪ್ರಾಮಾಣಿಕ ಕಲಿಕೆ, ಶ್ರಮದ ಫಲಿತಾಂಶ. ಇದು ದೇಹಾಭಿಮಾನಕ್ಕಾಗಿ ಮತ್ತು ದೇಶಾಭಿಮಾನಕ್ಕಾಗಿ. ಇದು ಜ್ಞಾನ ಸಮಾನತೆಗಾಗಿ, ಆರ್ಥಿಕ ಸಮಾನತೆಗಾಗಿ. ಇದು ವ್ಯವಹಾರ ಅಲ್ಲ. ಹೋರಾಟ ಅಲ್ಲ....ಪ್ರೀತಿಗಾಗಿ...ಈ ನೆಲದ ಪ್ರೀತಿಗಾಗಿ.



**ಬೇಕಾಗಿದ್ದಾರೆ.**

**ಬೇಡಿಕೆಯ, ಆಸಕ್ತಿ ಕಾಳಜಿಯ ಶಿಕ್ಷಕರು ಅಲ್ಲಲ್ಲಿ ಇದ್ದಾರೆ. ಗುರುತಿಸಿಕೊಂಡಿದ್ದಾರೆ. ಅವರಿಗೆ ಈ ಸುದ್ದಿ ಕೊಡಿರಿ.**

ಸ್ವರೂಪ ಶಿಕ್ಷಣ ವಿಶ್ವಕ್ಕೆ ಮಾದರಿಯಾಗಲು ಸಾಮರ್ಥ್ಯ ಹೊಂದಿದೆ. ಎಲ್ಲರೂ ಇದನ್ನು ಒಪ್ಪಿಕೊಳ್ಳುವಷ್ಟು ಸುಂದರ ವಿನ್ಯಾಸ ಸಿದ್ಧಗೊಂಡಿದೆ. ಇದೀಗ ನಾನು ಸ್ವರೂಪದಲ್ಲಿ ವಿದ್ಯಾರ್ಥಿಯಾಗಿದ್ದೇನೆ. ಶಿಕ್ಷಕಿಯೂ ಆಗಿದ್ದೇನೆ.1986ರಲ್ಲೇ ನಾನು ಗೋಪಾಡ್ಕರ್ ಸರ್ ವಿದ್ಯಾರ್ಥಿಯಾಗಿದ್ದೆ ಅನ್ನೋದು ಹೆಮ್ಮೆಯ ವಿಷಯವಾಗಿದೆ,



–ಸುಲೋಚನ ಪಿ.–ಸಾಹಿತಿ, ಉಪತಹಾಸೀಲ್ದಾರರು, ಪುತ್ತೂರು.

**STUDY TOUR**

2010–20
ಹತ್ತು ವರ್ಷ
ರಾಜ್ಯದ 1600
ಕೇಂದ್ರಗಳಲ್ಲಿ 6 ಲಕ್ಷ
ಮಕ್ಕಳು ಶಿಕ್ಷಕರು
ವೀಕ್ಷಿಸಿದ ಸ್ವರೂಪ
ಶಿಕ್ಷಣ ಜಾಗೃತಿ
ಜಾಥಾ
ಇದೀಗ ಶಾಲೆಗೆ
ಶಾಲೆ ತರಗತಿಗೆ
Study Tour




# ಈಗಿನ ಸಿಲೆಬಸ್ ಪೋರ್ಷನ್‌ಗೆ ಅಡ್ಡಿ ಇದೆಯೇ ಶಿಕ್ಷಣ ಇಲಾಖೆಯ ಸಹಕಾರ ಹೇಗೆ.........?

ಸ್ವರೂಪ ಅಧ್ಯಯನ ಕೇಂದ್ರವು ಮಕ್ಕಳು ಶಿಕ್ಷಕರ ಜೊತೆಗೆ 18 ವರ್ಷ ನಡೆಸಿದ ಪ್ರಯೋಗದ ಫಲಿತಾಂಶದ ಶಿಕ್ಷಣ ಜಾಗೃತಿ ಜಾಥಾ 2018 ರಿಂದ 10 ವರ್ಷಗಳ ಕಾಲ ರಾಜ್ಯದ 1600 ಕೇಂದ್ರಗಳಲ್ಲಿ ಅಂದರೆ ರಾಜ್ಯದ ಹೆಚ್ಚಿನ ತಾಲೂಕು ಕೇಂದ್ರಗಳಲ್ಲಿ ಜಿಲ್ಲಾಧಿಕಾರಿಗಳು ಮತ್ತು DDPI ಮೂಲಕ ಪ್ರದರ್ಶನ ಕಂಡಿದೆ. ಜೀರೋ ಮಕ್ಕಳು ಹೇಗೆ ಹೀರೋ ಆಗ್ತಾರೆ ಅನ್ನೋ ಸಾಧ್ಯತೆಯ ಮೂರು ಗಂಟೆಗಳ ಕಾಲ ಪ್ರದರ್ಶನವಾಗಿದೆ. ವರ್ಷದಲ್ಲಿ 90 ದಿನಗಳ ಶಿಕ್ಷಣ ಜಾಗೃತಿ ಜಾಥಾ ಪ್ರದರ್ಶನ ಕಂಡು 6 ಲಕ್ಷಕ್ಕೂ ಹೆಚ್ಚು ಶಿಕ್ಷಕರು ಮತ್ತು ಮಕ್ಕಳು ಸಂತಸದ ಬೇಡಿಕೆ ಇಟ್ಟಿದ್ದಾರೆ. "ನಮಗೂ ಈ ಶಿಕ್ಷಣ ಕೊಡಿ.... ನಮ್ಮನ್ನೂ ಈ ಸಾಧನೆಯ ದಾರಿಯಲ್ಲಿ ಕರೆದುಕೊಂಡು ಹೋಗಿ". ಅನ್ನೋ ಬೇಡಿಕೆಯೇ ಸ್ವರೂಪ Study Tour.

ಸ್ವರೂಪ ಅಧ್ಯಯನ ಕೇಂದ್ರದ ಸಂಚಾಲಕ ಗೋಪಾಡ್ಕರ್ 40 ವರ್ಷಗಳಿಂದ ಮಕ್ಕಳ ಶಿಕ್ಷಕರ ಜೊತೆಗಿದ್ದು ನಡೆಸಿದ ಸಂಶೋಧನೆಯೇ ಇಂದಿನ Swaroopa Study Tourಗೆ ಮಾದರಿಯಾಗಿದೆ. ಗೋಪಾಡ್ಕರ್ ಮತ್ತು ಸುಮಂಗಲ ಶಿಕ್ಷಣ ತರಬೇತಿ ಸಂಸ್ಥೆಯ ಪ್ರಶಿಕ್ಷಕರಾಗಿ ವೃತ್ತಿ ಮಾಡಿದ ಕಾಲದಲ್ಲೇ (1993 DIET ಮತ್ತು ರೋಸಾಮಿಸ್ಟಿಕಾ ಮಂಗಳೂರು) ಸ್ವರೂಪ ಅಧ್ಯಯನ ಕೇಂದ್ರ ಸಮೂಹ ಹುಟ್ಟಿಕೊಂಡಿತು. ಮಗಳು ಆದಿ ಸ್ವರೂಪ ಇದೀಗ Study Tourಗೆ ಮಾದರಿಯಾಗಿದ್ದಾಳೆ.

## ಈಗಿನ ಸಿಲಬಸ್ ಪೋರ್ಷನ್‌ಗೆ ಇದು ಪೂರಕವೇ ? : ಹೌದು....ಹೌದು.... ಇದು ಪೂರ್ಣ ಪೂರಕ.

ಆಸಕ್ತಿದಾಯಕ ಕಲಿಕೆಗೆ ಕಾರಣ ಸೃಷ್ಟಿಸುವುದು.
**ನೆನಪು ಶಕ್ತಿ ಹೆಚ್ಚಿಸುವುದು, ಬ್ರೈನ್ ಸ್ಕಿಲ್ ಡೆವಲಪ್ಮೆಂಟ್ ಚಟುವಟಿಕೆ,** 10 ಹಲವು ಪ್ರತಿಭೆಗಳಿಗೆ ಸಮಯ ಮಲ್ಟಿಟಾಸ್ಕ್‌ನಿಂದ ಹೊಂದಿಕೆಯಾಗುವುದು. ಮುಖ್ಯವಾಗಿ ತೆಗೆದುಕೊಳ್ಳುವ ಗುಣ ಆರಂಭವಾದಾಗ ಬುದ್ಧಿ ಚುರುಕಾಗಿ ಜ್ಞಾನ ಹೆಚ್ಚಾಗಿ ಪರೀಕ್ಷೆಯ ಫಲಿತಾಂಶ ಉತ್ತಮವಾಗುವುದು.

## ಜ್ಞಾನ, ಪ್ರತಿಭೆ ಹೆಚ್ಚಾದಂತೆ ಸ್ವಕಲಿಕೆಗೆ ಕಾರಣ ಹುಟ್ಟಿಕೊಳ್ಳಲಿದೆ.

ಒಂದು ಶಾಲೆಯ ಎಲ್ಲಾ ಮಕ್ಕಳೂ ಸ್ವರೂಪ Study Tourಗೆ ಬಂದಾಗ ಅದ್ಭುತ ಪ್ರತಿಭೆ ಹಾಗೂ ಕಲಿಕೆಯ ಫಲಿತಾಂಶದ ಮೂಲಕ ಎಲ್ಲರೂ ಸಾಧಕರಾಗುವುದಕ್ಕೆ ಇದು ಕಾರಣವಾಗಲಿದೆ. ಒಂದು ಅಥವಾ ಎರಡು ತಿಂಗಳಲ್ಲಿ ಎಲ್ಲಾ ಪೋರ್ಷನ್ ಮುಗಿಸಿ, ಎಲ್ಲರೂ ಚಿತ್ರದ ನೋಟ್ಸ್ Visual Memory Art ಮೂಲಕ ಪೂರ್ಣ ನೆನಪಲ್ಲಿ ಉಳಿಸಿ, ಉಳಿದ ದಿನಗಳಲ್ಲಿ ಹಲವು ಸಾಧನೆಗೆ ದಾರಿಯಾಗುವುದು ಸತ್ಯ. ಹತ್ತನೇ ತರಗತಿ ಪೋರ್ಷನ್ ಹತ್ತು ಸಲ ಮುಗಿಸಿ ನೂರಾರು ಸಲ ರಿವಿಜನ್ ಬೇಕಾದ್ರೂ ಮಾಡಬಹುದು ಆದರೆ ...60% ಮಕ್ಕಳಿಗೆ ಓದು, ಬರಹ, ಸ್ವೀಕಾರ ಗುಣ ಇಲ್ಲದ ಬೇಸಿಕ್ ಸಮಸ್ಯೆ ಇದೆ. ಅದಕ್ಕೂ ಇಲ್ಲಿ ಪರಿಹಾರವಿದೆ.

ಸ್ವರೂಪ Study Tour ಗೆ ಉದ್ಘಾಟನೆ
ಶಶಿಧರ್ ಜಿ.ಎಸ್.
DIET ಹಿರಿಯ ಉಪಾನ್ಯಾಸಕರು ಮಂಗಳೂರು





**ಶಿಕ್ಷಣ ಇಲಾಖೆ ಸಹಕಾರ :** ಆಸಕ್ತ ಶಿಕ್ಷಕರಿಗೆ ಶಾಲೆ ತರಗತಿಗಳಲ್ಲಿ ಇದನ್ನು ಪ್ರಯೋಗ ಮಾಡಲು ಅವಕಾಶ ಒದಗಿಸಿಕೊಡುವುದು. ಸದ್ಯ ತಾಲೂಕಿನ 10 ಶಿಕ್ಷಕರಿಗೆ ಸ್ವರೂಪ ಪ್ರದರ್ಶನ ನೋಡಿ ತಮ್ಮ ತಮ್ಮ ಶಾಲೆಗಳ 10 ಮಕ್ಕಳನ್ನು Study Tourಗೆ ಕರೆದುಕೊಂಡು ಹೋಗಲು ಅವಕಾಶ ಬೇಕಾಗಿದೆ.

ಸ್ವರೂಪ ಕಾಣುವ
ಸ್ವ–ದರ್ಶನ ಶಿಕ್ಷಣ
ಇದು ಅದೇ.. ಅದೇ ಅಲ್ಲಾ..

**ಪ್ರತ್ಯಕ್ಷ ಫಲಿತಾಂಶದ ಸಾಕ್ಷಿ ಇದ್ದಾಗ ಯಾರೂ ಇದನ್ನು ಒಪ್ಪದೇ ಇರಲಾರರು.**

ಮಕ್ಕಳೊಳಗಿನ ಸಾಧ್ಯತೆಗಳ ಅನಾವರಣಕ್ಕಾಗಿ ಆಯ್ದುಕೊಳ್ಳಿ ಸ್ವರೂಪ ಶಿಕ್ಷಣ. ತಮ್ಮ ಸಾಮರ್ಥ್ಯಗಳನ್ನು ಅರಿತು ಸಾಧಕರಾಗಲು ಬೇಕು ಸ್ವರೂಪ ಶಿಕ್ಷಣ. ಕಳಕೊಂಡ ಪ್ರಜ್ಞೆಯನ್ನು ಹುಡುಕಿಕೊಡುತ್ತದೆ. ಇದು ಬದುಕಿನ ಶಿಕ್ಷಣ. ಕಲಿಕೆಗೊಂದು ಕಾರಣವನ್ನು ಸೃಷ್ಟಿಸಿ ಕಲಿಯುವಂತೆ ಮಾಡುವ ವಿಭಿನ್ನ ಪ್ರಯೋಗಗಳೇ ಸ್ವರೂಪ ಶಿಕ್ಷಣದ ವಿಶೇಷ.



–ತೇಜಸ್ವಿ ಅಂಬೆಕಲ್ಲು, ಟೀಚರ್, ಪೋಷಕರು

# SWAROOPA STUDY TOUR

## ಫಲಿತಾಂಶ ಹೇಗೆ ದಾಖಲಾಗಲಿದೆ.

**ಯಾಕಾಗಲ್ಲ?**

**Portion ಮುಗಿಸೋ ವಿಧಾನ ಮತ್ತು ಅವಧಿ ಬದಲಾದರೆ ಈ ದೇಶದ ಎಲ್ಲಾ ಮಕ್ಕಳು ಬ್ರಿಲ್ಲಿಯಂಟ್ ಮತ್ತು ಶ್ರೇಷ್ಠ ಸಾಧಕರು ಆಗಿಯೇ ಆಗುತ್ತಾರೆ.**

ಉತ್ತಮ ಗುಣ, ಫಲಿತಾಂಶ, ಸಾಮರ್ಥ್ಯ, ಪ್ರತಿಭೆ ಬೆಳೆಯುತ್ತಿರುವ ಪ್ರದರ್ಶನ ಕಂಡಾಗ ನಂತರದ ಸುತ್ತಲೂ ಎಲ್ಲರಿಗೂ ಸಹಜವಾಗಿ ಬೇಡಿಕೆ ಹೆಚ್ಚಾಗಲಿದೆ. SNDE 10x10 ನಿತ್ಯ ಕಲಿಕೆ–ನಿತ್ಯ ಪ್ರದರ್ಶನ ಮುಖ್ಯವಾಗಿದೆ. ನಿನ್ನೆಯ ದಿನ ಈ ದೇಶದ 95% ಮಕ್ಕಳ, ಶಿಕ್ಷಕರ, ಪೋಷಕರ ನಿತ್ಯ ಬೆಳವಣಿಗೆಯ ಪ್ರದರ್ಶನ ಬಹಿರಂಗ ಆಗಿಲ್ಲ. ಎಲ್ಲರಿಗೂ ಬೇಕಾಗಿರೋದು ನಿತ್ಯ ಬೆಳವಣಿಗೆಯ ಫಲಿತಾಂಶ, Zero ಟ್ಯಾಲೆಂಟ್, Zero ಡೆವಲಪ್‌ಮೆಂಟ್ ಪರೀಕ್ಷೆಗಾಗಿ ಮಾತ್ರ ಪಠ್ಯ ಜ್ಞಾನವಾಗಿದೆ. ನೆನ್ನೆಯ ದಿನ ಯಾರೂ ಜ್ಞಾನ ಹೆಚ್ಚಾಗಲು ಪ್ರಜ್ಞಾಪೂರ್ವಕವಾಗಿ 10 ಪ್ರಶ್ನೆ ಯಾರಲ್ಲೂ ಕೇಳಿ ತಿಳಿದುಕೊಂಡಿಲ್ಲ. ಒಂದೇ ಒಂದು ಹೊಸ ಪದ ಬಳಕೆಯಾಗಿಲ್ಲ. Knowledge Bank ಮತ್ತು Word Bank ಡೆಡ್ ಆಗಿದೆ. ಶಾಲೆ ಪರೀಕ್ಷೆ, ಕಲಿಯುವುದು, ಮರೆಯುವುದು, ಮರೆತದ್ದಕ್ಕೆ ಸಿಕ್ಕಿದ ಸರ್ಟಿಫಿಕೇಟ್‌ಗೊಂದು Job, ಸಾಮರ್ಥ್ಯ ಸಾಧನೆ....?

**ಪಾಠ ಪೋರ್ಷನ್ ಅಂಕ ಚೆನ್ನಾಗಿ ನಡೀತಾ ಇದೆ.ರ್‍ಯಾಂಕ್‌ಗಳೂ ಬರ್‍ತಾ ಇವೆ.ಶಿಕ್ಷಕರೂ ಶಿಸ್ತು ಬದ್ಧ ಕೆಲಸ ಮಾಡುತ್ತಿದ್ದಾರೆ. ಸರ್ಟಿಫಿಕೇಟ್ ಬೇಕು. ಸಿಕ್ಕಾ ಇದೆ. ಆದರೆ ಇದು ಅದಲ್ಲಾ..ಇದು ಸುಲಭದಲ್ಲಿ ಸಿಗಲಿರುವ ಫಲಿತಾಂಶದ ಸಮಾನತೆಯ ಜತೆಗೆ ಪ್ರತಿಭೆ, ಸಾಮರ್ಥ್ಯ, ಸಾಧನೆ, ಶಿಕ್ಷಣ ಸಮಾನತೆಗಾಗಿ ಸ್ವರೂಪ. ಅನೇಕ ವರ್ಷಗಳ ಸ್ವರೂಪ ಸಂಶೋಧನೆಯ ಫಲ.**

**SNDE-WWHKST 6 Banks**

**ಶಿಕ್ಷಣ ಸಾಧ್ಯತೆಯ ಕ್ರಾಂತಿಯಲ್ಲಿ ಬಹುಪಾಲು ದಾಖಲೆ ಸ್ಥಾನ ಪಡೆದುಕೊಳ್ಳಲಿದೆ.**

Word Bank, Health Bank, Wealth, knowledge, Skill & Talent Banks.
Study Tour ಗೆ ಆಯ್ಕೆಯಾದ ಸ್ವರೂಪ ಜ್ಞಾನಭಾರತ ಗುರುಗಳು
ಈ ಎಲ್ಲಾ ಬ್ಯಾಂಕ್ ವ್ಯವಹಾರದ ಜ್ಞಾನ ತರಬೇತಿ ಪಡಕೊಳ್ಳುತ್ತಾರೆ.

## Study Tour ಫಲಿತಾಂಶ ದಾಖಲೆ :

ಒಂದು ಶಾಲೆಯಿಂದ ಆಯ್ಕೆಯಾದ 10 ಮಕ್ಕಳೂ ಅಥವಾ ಪೂರ್ಣ ಸ್ವರೂಪ ಶಿಕ್ಷಣಕ್ಕೆ ಆಯ್ಕೆಯಾಗಿ ಒಪ್ಪಿಕೊಂಡ ಶಾಲೆಯ ಎಲ್ಲಾ ಮಕ್ಕಳಿಗೆ ಸ್ವರೂಪ SNDE 10x10 ತರಬೇತಿ ಪ್ರಕಾರ ನಿತ್ಯ ಪ್ರದರ್ಶನದ ದಾಖಲೆಯ ಸುದ್ದಿ ಮಾಡಲಿದ್ದೇವೆ.

ನಮ್ಮನ್ನು ಪೋಷಕರು, ಬಂಧುಗಳು, ಸಾರ್ವಜನಿಕರು– ಹೀಗೆ ಯಾರೋ ಗಮನಿಸುತ್ತಾರೆ ಅಂತ ತಿಳಿದಾಗ ನಿತ್ಯದ ಕಲಿಕೆ ಪ್ರದರ್ಶನದಲ್ಲಿ ಶಕ್ತಿ ಸಾಮರ್ಥ್ಯ ಇನ್ನಷ್ಟು ಹೆಚ್ಚಾಗಲಿದೆ ಅನ್ನೋದು ಸತ್ಯ ಅಲ್ವೆ? ಈ ಸಂತಸ ಸಂಭ್ರಮದ ಕಲಿಕೆಗೆ 1000 ಲಕ್ಷಗಳಲ್ಲಿ ನಿತ್ಯ ಸಿಗುವ ಅಂಕಗಳಿಗಾಗಿ ವಿದ್ಯಾರ್ಥಿಗಳು ಸ್ಪರ್ಧಾತ್ಮಕವಾಗಿ ತಮ್ಮನ್ನು ತಾವೇ ಸ್ವಕಲಿಕೆಯಲ್ಲಿ ತೊಡಗಿಸಿಕೊಳ್ಳುತ್ತಾರೆ. ಇಲ್ಲಿ ಸಾಮಾನ್ಯ ವಿದ್ಯಾರ್ಥಿಗಳಿಗೂ ಶಿಕ್ಷಕರು, ಪೋಷಕರು, ಮೊದಲು ಸಾಧನೆ ನಂತರ ಕಲಿಕೆಗೆ ಪ್ರೇರಣೆ ಆಗಲಿದ್ದರೆ.

ನಿತ್ಯದ ಗೂಗಲ್ ಮೀಟ್‌ಗೆ ಪಾಲ್ಗೊಂಡು ಪ್ರೋತ್ಸಾಹ, ಬೆಂಬಲ, ಎಲ್ಲರಿಂದಲೂ ಹೆಚ್ಚೆಚ್ಚು ಪಡಕೊಳ್ಳುತ್ತಾರೆ. ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳೂ ವಿಶ್ವ ದಾಖಲೆಯಸಾಧನೆಯಲ್ಲೂ ಸದಾ ಸುದ್ದಿಯಲ್ಲಿರುತ್ತಾರೆ. ಆ ಸಂದರ್ಭ ವಿಶೇಷ ಸಾಧಕ ಮಕ್ಕಳಿಗೆ ಅಗತ್ಯ ಇರುವಷ್ಟು ತರಬೇತಿಗೆ ಸ್ವರೂಪ ಅಧ್ಯಯನ ಕೇಂದ್ರ ತಂಡ ಹತ್ತಿರ ಹೋಗಿ ಸಹಕರಿಸಿ ಯುಟ್ಯೂಬ್ ಚಾನೆಲ್‌ಗೆ ದಾಖಲಿಸುತ್ತಾರೆ. ಸಾವಿರಾರು ಮಕ್ಕಳು ತಮ್ಮ WORLD RECORD ಸಂಖ್ಯೆಯನ್ನು ಇನ್ನಷ್ಟು ಹೆಚ್ಚಿಸಿಕೊಳ್ಳುತ್ತಾರೆ.

### ಸ್ವರೂಪ

**ಸ್ವರೂಪ ಅಧ್ಯಯನ ನಿಂತಿರೋದು**

**ಸ್ವರೂಪ ತಂತ್ರ** ______

**ಸ್ವರೂಪ ಸಿದ್ಧಾಂತ** ______

**ಸ್ವರೂಪ ಮನೋವಿಜ್ಞಾನ** ______

**ಸ್ವರೂಪ ಶಿಕ್ಷಣ** ______

**ಸ್ವರೂಪ ಸ್ಮರಣ ಶಕ್ತಿ**–ಎನ್ನುವ

**ಪಂಚಕ್ಷೇತ್ರ ಸೂತ್ರಗಳ ಆಧಾರದಲ್ಲಿ.**

**ಗುರುಗಳೇ ರಾಜರಾಗಬೇಕು**

ಹೆಚ್ಚಿನ ಶಿಕ್ಷಕರು ಸಾಧಕರು ಪ್ರತಿಭಾವಂತರೇ ಇದ್ದಾರೆ. ಮಕ್ಕಳ ಕಲಿಕೆ ಸಾಧನೆಗಾಗಿ ಶ್ರಮ ಹಾಕುತ್ತಲೇ ಇದ್ದಾರೆ. ಸ್ವರೂಪ ಸಾಧನ ಶಿಕ್ಷಣ ಶೋಧನೆಯ ಆಸ್ತಿ ಶಿಕ್ಷಕರು, ಶಿಕ್ಷಕರಿಗೆ ಗೌರವ ಹೆಚ್ಚು ಸಿಗುವಂತಾಗಲು SNDE ಯೋಜನೆಯಲ್ಲಿ **ಗುರುರಾಜ ಸಾಮ್ರಾಜ್ಯವನ್ನೇ ಸ್ಥಾಪಿಸಲಾಗುವುದು.**

**ಯಥಾರಾಜಾ ತಥಾ ಪ್ರಜಾ**



**ಸ್ವರೂಪ ಸಿದ್ಧಾಂತ:** ನಾನು ಯಾರು? ನಾನು ಎಲ್ಲಿದ್ದೇನೆ? ನಾನು ಏನು ಮಾಡುತ್ತಿದ್ದೇನೆ? ನಾನು ಎಲ್ಲಿಗೆ ಹೋಗುತ್ತಿದ್ದೇನೆ ? ನಾನು ಏನನ್ನು ಕೊಂಡು ಹೋಗುತ್ತಿದ್ದೇನೆ ? ಎನ್ನುವ ಅರಿವಿನ ದರ್ಶನವೇ ಸ್ವರೂಪ.

**ಸ್ವ–ರೂಪ : ಸ್ವರೂಪ =Self. ಸ್ವರೂಪ = ಸ್ವರ+ರೂಪ – Voice and Expression**

**ನನ್ನ ನಂಬಿಕೆ ನನ್ನ ಮೇಲೆ ಆರಂಭವಾದಾಗ ನಾನು ಶಕ್ತಿ -ಪ್ರಭಾವಿ- ಮೇಧಾವಿ- ಸಾಧಕ–ಜ್ಞಾನಿ.**

ಸ್ವರೂಪ ಶಿಕ್ಷಣ ದೇಶಕ್ಕೆ ಮಾದರಿ. ಸ್ವರೂಪ ಸಾಮರ್ಥ್ಯ ಆಧಾರಿತ ಶಿಕ್ಷಣ. ಸರ್ಟಿಫಿಕೇಟ್ ಶಿಕ್ಷಣಕ್ಕೆ ಇದು ಖಂಡಿತ ಪರ್ಯಾಯ ಆಣಲಿದೆ. ಈ ದೇಶಕ್ಕೆ ಸ್ವರೂಪ ಶಿಕ್ಷಣವೇ ಬೇಕು ಅನ್ನೋ ಹೋರಾಟವೇ ಆಗಬೇಕು.ಈಗ ಸ್ವರೂಪದಲ್ಲಿ ನನ್ನ ಮಗನ ಅಕ್ಷರ ಚಂದ ಆಗಿದೆ. ನೆನಪು ಶಕ್ತಿ ಹೆಚ್ಚಾದದ್ದು ಮತ್ತು 2 ವಿಶ್ವ ದಾಖಲೆ ಮಾಡಿಕೊಂಡದ್ದು ಹೆಚ್ಚು ಅನಿಸ್ತದೆ. ಸ್ವರೂಪಕ್ಕೆ ಕಳುಹಿಸಿದ್ದು ಸಾರ್ಥಕ ಆತವೆ.



– ಪಂಪಾಪತಿ, ಪೋಷಕರು ಶಿವಮೊಗ್ಗ, ಸ್ವರೂಪ ಟ್ರಸ್ಟಿ

## ನಿಮ್ಮ ಊರಿನ ನಿಮ್ಮ ಶಾಲೆಯ ಮಕ್ಕಳಿಗೆ ಸ್ವರೂಪ ಸಾಧನಾ ಶಿಕ್ಷಣ ಬೇಕೇ?

ಸ್ವರೂಪ ಶಿಕ್ಷಣ ಯಾವಾಗ? ಎಲ್ಲಿಂದ ಆರಂಭ? ಮೊದಲು ನೀವು ಒಪ್ಪಿಕೊಳ್ತೀರಾ? ಅಲ್ಲಿಂದಲೇ ಆರಂಭ..

# ಹೌದು....ಹೌದು....ಹೌದು....!

ಇದು ಅದಲ್ಲ ಒಪ್ಪಿಕೊಳ್ಳುತ್ತೀರಾ? ಎಲ್ಲಾ ದೌರ್ಬಲ್ಯ–ಕೊರತೆಗಳಿಂದ ಮಕ್ಕಳು ಶಿಕ್ಷಕರು ಬಿಡುಗಡೆ ಆಗಲಿದ್ದಾರೆ.

ಜಗತ್ತಿನ ಅತೀ ದೊಡ್ಡ ಸುಳ್ಳು 'ಪುರುಸೊತ್ತಿಲ್ಲ' ಅನ್ನೋದನ್ನ ಹೇಳ್ಬೇಡಿ. ಪ್ರಾಮುಖ್ಯತೆ ಕೊಟ್ಟಿಲ್ಲ ಅನ್ನಿ.ಅಷ್ಟೇ!

- ಸ್ವರೂಪ ಶಿಕ್ಷಣದಿಂದ ಮಕ್ಕಳು ಸಾಧಕರಾಗ್ತಾರಾ....? **ಹೌದು!**
- ದೇಶದ ಎಲ್ಲ ಮಕ್ಕಳು ಬ್ರಿಲಿಯಂಟ್. ಫೇಮಸ್ ಆಗ್ತಾರಾ ....? **ಹೌದು!**
- 60% ಮಕ್ಕಳಿಗೆ ಸರಿಯಾಗಿ ಓದಲು ಬರೆಯಲು ಬರಲ್ಲಾ.,,, ಈ ಎಲ್ಲ ಸಮಸ್ಯೆಗಳಿಗೂ ಪರಿಹಾರವೇ ...? **ಹೌದು!**
- ಮಾತುಗಾರರು, ಬರಹಗಾರರು, ಕಲಾವಿದರಾಗ್ತಾರಾ ...?(ಎಲ್ಲವೂ ದೂರ) **ಹೌದು!**
- ಗಣಿತದಲ್ಲಿ ಎಲ್ಲರೂ ಬುದ್ಧಿವಂತರಾಗ್ತಾರಾ...?**ಹೌದು!**
- ಭಾಷಣ ಬೋಧನೆ ಸಲಹೆ ಹೊರತುಪಡಿಸಿ ಫಲಿತಾಂಶದ ಮಾತುಗಾರರಾ...? **ಹೌದು!**
- ಗ್ರಹಿಕೆ, ವಿಚಾರ, ಚಿಂತನೆ, ಕ್ರಿಯಾಶೀಲತೆ ಸೃಜನಶೀಲತೆ, ಸ್ವೀಕಾರ ಸಾಮರ್ಥ್ಯ ಸಿಟ್ಟು ಒಟ್ಟು ತಾಳ್ಮೆ, ವಿನಯ-ಸತ್ಕಾರ, ಸಂಸ್ಕಾರ, ಉಪಕಾರ, ಸ್ಮರಣೆ, ಎಲ್ಲವೂ ಸ್ವರೂಪ ಶಿಕ್ಷಣದಿಂದಾಗಿ ಎಲ್ಲರಲ್ಲೂ ಈ ಎಲ್ಲಾ ಗುಣ ತುಂಬಿಕೊಳ್ಳುತ್ತದಾ...?**ಹೌದು!**
- ಶಿಕ್ಷಕರು ಪೋಷಕರೂ ಕಲಿಕೆ ಗುಣ ಸಾಮರ್ಥ್ಯಗಳಲ್ಲಿ ಬದಲಾಗುತ್ತಾರಾ...?**ಹೌದು!**
- ಪರೀಕ್ಷೆ ಫಲಿತಾಂಶ ಎಲ್ಲರಿಗೂ ಉತ್ತಮವಾ....?**ಹೌದು!**
- ಇನ್ನು ಮುಂದೆ ಮಕ್ಕಳು ಯಾರೂ ಸಾಮಾನ್ಯರಾಗಿ ಇರದೆ ಈಗಾಗಲೇ ಸ್ವರೂಪದಲ್ಲಿ ಇರುವಂತೆ ಸಾಧಕರಾಗ್ತಾರಾ..?**ಹೌದು !**

**ಸ್ವೀಕಾರದ ಕೊರತೆ**

ನಿಮ್ಮ ಊರಿನ ನಿಮ್ಮ ಶಾಲೆಯ ಮಕ್ಕಳು ಸಾಧಕರಾಗಿಲ್ಲವೇ.? ಹಿರಿಯರು ನೀವುಗಳೂ ಸಾಧಕರಾಗಿಲ್ವೆ? ಹಾಗಾದ್ರೆ ಆ ಊರಲ್ಲಿ ಶಾಲೆ ಮನೆಗಳಲ್ಲಿ ಯಾರಲ್ಲೋ ಈ ಎಲ್ಲಾ ಕೊರತೆಗಳು ಇವೆ ಅಲ್ವೇ? ಹಾಗಿದ್ರೆ ಮೊದಲು ಒಪ್ಪಿಕೊಳ್ಳೋಣ. ಮತ್ತೆ ಪರಿಹಾರ ನೋಡೋಣ..?

**ಪರ್ಯಾಯ ದಾರಿ ಕಂಡಿಲ್ಲ**

## ಶಾಲೆಯ ಶಿಕ್ಷಣ, ಮಿತಿಯ ಕೇಂದ್ರ–ಬದಾವಣೆಗೆ ಒಪ್ಪುತ್ತೀರಾ ?

- ಲೋಕ ಜ್ಞಾನ, ಲೋಕಲ್ ಜ್ಞಾನ, ಪಠ್ಯಜಾನ ಲಕ್ಷ ಲಕ್ಷ ಸಾಮಾನ್ಯ ಜ್ಞಾನಗಳನ್ನು ತರಗತಿಯ ಎಲ್ಲಾ ಮಕ್ಕಳೂ ಈ ಸ್ವರೂಪ ಶಿಕ್ಷಣ ತಂತ್ರದಿಂದ ನೆನಪಿಟ್ಟುಕೊಳುತ್ತಾರಾ.........? **ಹೌದು**.
- ಈಗಾಗಲೇ ಜೀರೋದಲ್ಲಿರುವ ತೆಗೆದುಕೊಳ್ಳುವ ಗುಣ (ಒಪ್ಪಿಕೊಳ್ಳುವ – ಪ್ರಶ್ನಿಸಿ ಕೇಳಿ ಕೇಳಿ ತಿಳಿದುಕೊಳ್ಳುತ್ತಲೇ ಇರುವ) 10% ಆಗಲಿದೆಯೇ ? 1% ಆದರೂ ಗ್ರೇಟ್......**ಹೌದು**.
- ಎಲ್ ಕೆ ಜಿ ಯಿಂದ 10ನೇ ತರಗತಿಗೆ ಬರುವಷ್ಟರಲ್ಲಿ ಹತ್ತತ್ತು ವಿಶ್ವದಾಖಲೆ ಎಲ್ಲರೂ ಮಾಡ್ತಾರಾ..ಎಲ್ಲರೂ ಪುಸ್ತಕ ಬರೆಯುತ್ತಾರಾ? ಬಹುಪಾಲು ಜೊತೆಗಿರುವವರು ಪ್ರೇರಣೆಯಾದರೆ ಸಾಧ್ಯವಿದೆ...**ಹೌದು**.

**ಸತ್ಯವಿದೆ ಉತ್ತರವಿದೆ ಆಧಾರವಿದೆ**

**ಮಕ್ಕಳ ಸಾಧಕರು ಆಗಲೇ ಬೇಕೆ?**

## ಹಾಗಾದರೆ ಮಕ್ಕಳು ಯಾರ ಜೊತೆ ಎಲ್ಲಿ ಇದ್ದರೆ ಸರಿ, ಹೇಗಿದ್ದರೆ ಸರಿ?

- 7ನೇ 8ನೇ 9ನೇ ತರಗತಿ ಮಕ್ಕಳಿಗೆ 10ನೇ ತರಗತಿ ಪೋರ್ಷನ್ ಮೊದಲೇ ಒಂದೇ ತಿಂಗಳಲ್ಲಿ ಮುಗಿದಿರುತ್ತದಾ? ,,..**ಹೌದು**.


  ಶಿಕ್ಷಕರು ಪಾಠ ಪೋರ್ಷನ್ ಹೋರಾಟ ಸ್ವರೂಪ ಶಿಕ್ಷಣದ ನಂತರ ಬೇಕಿಲ್ಲ ಹೌದು.... ಬೈಹಾರ್ಟ್ ನಕಲು ಬೇಡವೇ ಬೇಡ....ಹೌದು.
- ಎಲ್ಲರೂ ಪರಿಕ್ಷೆ ಎರಡು ಕೈಗಳಲ್ಲಿ ಬರೀತಾರಾ..? 10 ಭಾಷೆ ಎಲ್ಲರಿಗೂ ಬರ್ತದಾ ...? **ಹೌದು...ಹೌದು**.



ಇನ್ನೂ ಹೇಳೋದು ನೂರಾರು ಇವೆ .....
ಹಾಗಾದ್ರೆ ಇದೆಲ್ಲವೂ ಸತ್ಯವೇ ಹೌದಾದರೆ, ಒಪ್ಪಿಕೊಳ್ಳದೇ ಇರುವವರು ಯಾರು ?

**ಒಂದು ಶಾಲೆ ಪೂರ್ಣ ಒಪ್ಪಿದಾಗ ಇವೆಲ್ಲವೂ ಸಾಧ್ಯ. ಸಾಧಕರಾಗಲು ಬಿಡಿ.**

ಸ್ವರೂಪ ಶಿಕ್ಷಣ ದೊಡ್ಡವರಿಗೆ ಅರ್ಥ ಆಗುವುದಕ್ಕಿಂತ ಬೇಗನೆ ಮಕ್ಕಳಿಗೆ ಅರ್ಥ ಆಗುತ್ತದೆ. SNDE 10x10 ಯೋಜನೆ ದೇಶದ ಶಿಕ್ಷಣ ಮತ್ತು ಆರ್ಥಿಕ ಅಭಿವೃದ್ಧಿಗೆ ಅದ್ಭುತ ಕೊಡುಗೆಯಾಗಿದೆ. ಇದನ್ನು ಎಲ್ಲರೂ ಸ್ವೀಕರಿಸುವ ಕಾಲ ಹತ್ತಿರವಿದೆ.



-ಗುರುರಾಜ ಮಾರ್ಪಳ್ಳಿ-ಸಾಹಿತಿಗಳು, ಯಕ್ಷಗಾನ ಕಲಾವಿದರು.

**ಸ್ವರೂಪ ಶಿಕ್ಷಣ ವಿಶ್ವಕ್ಕೇ ದಾಖಲೆ**



ಆದಿ ಸ್ವರೂಪ-10 ವಿಶ್ವದಾಖಲೆ

## SWAROOPA GENIUS ACADEMY
# GENIUS WORLD RECORD

Swaroopa Genius Academy ಮೂಲಕ Genius world record ಕೊಡುವ SNDE ಯೋಜನೆಯು ಸಿದ್ಧತೆಯಲ್ಲಿದೆ. SGWRನಿಂದ ಬೇಕಾದ ತರಬೇತಿ ಸ್ಕಾಲರ್ಶಿಪ್ ಗಿಫ್ಟ್ ನಿಧಿ ಸಿಗಲಿದೆ. ಜ್ಞಾನಭಾರತ ಯೋಜನೆಗಳಿಗೆ **"ನಮಸ್ತೆ ಸ್ವರೂಪ ಪಬ್ಲಿಕ್ ಲಿಮಿಟೆಡ್ ಕಂಪನಿ", ಜ್ಞಾನಭಾರತ ರಾಷ್ಟ್ರೀಯ ಸೇವಾ ಸಹಕಾರಿ ಸಂಘ** ಮತ್ತು SWAROOPA WORLD MOBILE UNIVERSITY ಇದರ ಮೂಲಕ ಸ್ವರೂಪದ ಮಕ್ಕಳ ಶಿಕ್ಷಣವು ವಿಶ್ವದಾಖಲೆಯ ಈ ಎಲ್ಲಾ ಸಾಧ್ಯತೆಗಳ ಜವಾಬ್ದಾರಿಗಳನ್ನು ನಿರ್ವಹಿಸಲಿದೆ.

ಸ್ವರೂಪ ಸಂಸ್ಥೆ ಆರಂಭಿಸುವ Genius World Record ಗೆ ಮೊದಲು ದೇಶದ ಮತ್ತು ಅನೇಕ ರಾಷ್ಟ್ರಗಳಲ್ಲಿರುವ ಉದಾ : India Book of Record, Limca Book, Exclusive Word Record ಮುಂತಾದ ಹಲವು ಸಂಸ್ಥೆಗಳಿಗೆ Apply ಮಾಡಿ Genius Award ಪಡೆಕೊಳ್ಳಬಹುದು.



ಪರೀಕ್ಷಿತ್ ಸುಳ್ಯ-8

## ಸ್ವರೂಪದ ಹಳೆ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ ಈವರೆಗೆ ಸಿಕ್ಕಿದ WORLD RECORD ಸಂಖ್ಯೆಗಳು



ಚಂದನ್ ಸುರೇಶ್ -6



ಪ್ರದೀಶ್ ಪೇತ್ರಿ-5



ಅಕ್ಷತಾ ಕುಡ್ಲ-1



ವಿಶ್ವಾಸ್ ಶಿವಕುಮಾರ್-1



ಚೇತನ್ ಕೊಪ್ಪ-1



ಸುಮಂಗಲ-1

## ಇದೀಗ ಸ್ವರೂಪ ಅಧ್ಯಯನ ಕೇಂದ್ರದಲ್ಲಿರುವ ಒಟ್ಟು 10 ವಿದ್ಯಾರ್ಥಿಗಳು ವಿಶ್ವ ದಾಖಲೆ ಮಾಡಿದವರು ಮತ್ತು ಸಿದ್ಧತೆಯಲ್ಲಿ ಇರುವವರು



ಶಾಂಭವಿ ಬಾಗಲಕೋಟೆ-1




ಅನ್ವೇಷ್ ಅಂಬೆಕಲ್ಲು-2+4



ಕಾವ್ಯ ಸ್ವರೂಪ ಸುಳ್ಯ-2+3



ಶ್ರವಣ ಬಾಗಿ ವಿಜಯಪುರ-3+11



ಪ್ರಸನ್ನ ಶಿವಮೊಗ್ಗ-2+8

ಬದಿಯಡ್ಕ ಕಾಸರಗೋಡು ಶ್ರೀ ಭಾರತೀ ವಿದ್ಯಾಪೀಠ




100 ವಿದ್ಯಾರ್ಥಿಗಳಿಂದ 3 ನಿಮಿಷದಲ್ಲಿ ಭಗವದ್ಗೀತೆ 20 ಅಡಿ ಕೃಷ್ಣನ ಚಿತ್ರ ರಚಿಸಿ ಬರಹ

## ಇವರು ನಿತ್ಯ ವಿಶ್ವ ದಾಖಲೆ ಸಿದ್ಧತೆಯಲ್ಲಿ ಇರುವವರು



ಶಿವಲಿಂಗ ಬಾಗಿ ವಿಜಯಪುರ+6



ಜನನ್ ಸ್ವರೂಪ ಬೆಂಗಳೂರು 2+8



ಹಿತಾ ಸುರೇಶ್, ಬೆಂಗಳೂರು+10



ನವನೀತ್, ಮಂಗಳೂರು+5



ರೋಚನಾ ಹಾಸನ+5



ವರುಣ್, ಬಾಗೆಪಲ್ಲಿ+2



ಪ್ರಣಾಮಿ, ವಾಮಂಜೂರು+2




ಸಾನ್ವಿ ಸ್ವರೂಪ+2

**ನಾವು ಹೊರಟೆವು**

ಸ್ವರೂಪದಲ್ಲಿ ಈಗ ಆಧ್ಯಯನದಲ್ಲಿರುವ 10 ವಿದ್ಯಾರ್ಥಿಗಳಿಗೂ ಈ ವರ್ಷವೇ ಹತ್ತತ್ತು ವಿಶ್ವದಾಖಲೆ ...ಯಾಕಾಗಲ್ಲ. ?
ಸ್ವರೂಪದ ಈ ವಿದ್ಯಾರ್ಥಿಗಳು ಮಾದರಿ ಕಲಿಕೆಯೊಳಗೆ ಬೇಗನೆ
Swaroopa Study tour Youtube Channel ಮೂಲಕ ಕಾಣಿಸಿಕೊಳ್ಳುತ್ತಾರೆ

**2024 April Memory Camp ಗೆ ಬಂದ ನೂರಾರು ವಿದ್ಯಾರ್ಥಿಗಳು ದಾಖಲೆಯ ಕಲಿಕೆಗೆ ಸಿದ್ಧರಾಗುತ್ತಿದ್ದಾರೆ...**
**One teacher 10 Students, Study tourಗೆ ನಿಮ್ಮ ಹತ್ತಿರ ಬರುತ್ತಿದ್ದೇವೆ .........ನೀವು ?**



ಸ್ವರೂಪ ಶಿಕ್ಷಣ ಅಪರೂಪದ ಆಕರ್ಷಣೆಯ ಎಲ್ಲರೂ ಸಾಧಕರಾಗುವ ಶಿಕ್ಷಣ–ದೇಶದ ಎಲ್ಲಾ ಮಕ್ಕಳಿಗೂ ಇದು ಸಿಗುವಂತಾಗಲಿ–ಗೋಪಾಡ್ಕರ್ ನೆನಪಿಗೆ ಚಿಕಿತ್ಸೆ ಕೊಡುವವರು ಜೊತೆಗೆ ಮಕ್ಕಳ ಮನೋತಜ್ಞರೂ ಹೌದು.

–ಡಾ| ಆರ್.ಸಿ.ಭಾರದ್ವಜ್, ಬೆಂಗಳೂರು, ಸ್ವರೂಪ ಹಿತೈಷಿಗಳು

# ಸ್ವರೂಪ ಶಿಕ್ಷಣ–ಪಕ್ಷಿ ನೋಟ

SNDE 10x10 - Swaroopa National Development Education

1. ಸ್ವರೂಪ ಪರ್ಯಾಯ ಶಿಕ್ಷಣಕ್ಕಾಗಿ ಗೋಪಾಡ್ಕರ್ ಬಳಗ 40 ವರ್ಷಗಳಿಂದ ನಡೆಸಿದ ಸಂಶೋಧನಾ ಆಧಾರಿತ ಫಲಿತಾಂಶದ ಮಾದರಿ. SNDE 10x10
2. ಸರಳ ಸುಂದರ ವಿನ್ಯಾಸದಲ್ಲಿ ಕ್ರಿಯಾತ್ಮಕವಾಗಿ, ಸೃಜನಶೀಲವಾಗಿ ರೂಪುಗೊಂಡಿದೆ.
3. ಶಿಕ್ಷಣದಲ್ಲಿ ಇದೊಂದು ಸಮಗ್ರ ಪರಿವರ್ತಿತ ಸಾಧ್ಯತೆಯ ಕ್ರಾಂತಿಯೆಂದು ಬಲ್ಲವರು, ಹತ್ತಿರದಿಂದ ಕಂಡವರು ಒಪ್ಪಿಕೊಂಡಿದ್ದಾರೆ, ಕೊಂಡಾಡಿದ್ದಾರೆ.
4. SWAROOPA STUDY TOUR ಎನ್ನುವ YOU TUBE CHANNEL ಮೂಲಕ ದೇಶಕ್ಕೆ ಇದು ಪರಿಚಯವಾಗಲು ಹೆಜ್ಜೆ ಇಟ್ಟಿದೆ.
5. ಈಗಿನ ಶಿಕ್ಷಣ ಸರಿ ಇಲ್ಲ. ಇದು ಬರೀ ಸರ್ಟಿಫಿಕೇಟ್ ಶಿಕ್ಷಣ, ತಾತ್ಕಾಲಿಕ ಪರೀಕ್ಷೆ ಮಾರ್ಕ್ ಆಧಾರಿತ. ಇದು ಸಾಮರ್ಥ್ಯದ ಶಿಕ್ಷಣ ಆಗಬೇಕೆಂಬುದು ಹಲವಾರು ದಶಕಗಳಿಂದ ಜನರ ಬೇಡಿಕೆಯಾಗಿದೆ. ಈ ನೆಲೆಯಲ್ಲಿ ಸ್ವರೂಪ ಶಿಕ್ಷಣವು ಸಂಪೂರ್ಣ ಪರ್ಯಾಯ ಮತ್ತು ಪರಿಹಾರವಾಗಲಿದೆ. ಇಲ್ಲೊಂದು ಸಾಧ್ಯತೆಯ ಸತ್ಯ ಬಹಿರಂಗವಾಗಿ ಹೊಸ ಇತಿಹಾಸ ನಿರ್ಮಾಣವಾಗಲಿದೆ.
6. ಈಗಿನ ಶಿಕ್ಷಣ ಪಠ್ಯ ಸಿಲೆಬಸ್ ಪರೀಕ್ಷೆ ವಿಧಾನಗಳಿಗೆ ಇದು ಏನೂ ಅಡ್ಡಿಯಾಗುವುದಿಲ್ಲ. ಪೋರ್ಷನ್ ಬೇಗನೆ ಮುಗಿಸಿ ಅಗತ್ಯವಿದ್ದಲ್ಲಿ ಹತ್ತಾರು ಸಲ ಪೋರ್ಷನನ್ನು ಮುಗಿಸಿದಂತಾಗಲಿರುವ (ಪಿರೆಡ್, ಬೆಲ್, ಬೋಧನೆ, ಕಲಿಕಾ ವಿಧಾನ ಸಣ್ಣ ವ್ಯತ್ಯಾಸ ಮಾಡಿಕೊಂಡರಾಯಿತು ಅಷ್ಟೆ) ಈ ಅವಕಾಶಗಳಿಂದ ವ್ಯವಸ್ಥೆಯ ಮಿತಿಯೊಳಗೆ ಬಂಧಿಯಾಗಿರುವ ಶಿಕ್ಷಕರು ಮತ್ತು ಮಕ್ಕಳನ್ನು SNDE 10x10 ಯೋಜನೆ ಕಲಿಕಾ ಸಾಮರ್ಥ್ಯ ಕೊರತೆಗಳಿಂದ ಬಿಡುಗಡೆ ಮಾಡಿದಂತಾಗಲಿದೆ.
7. ಇದು ಸ್ವತಂತ್ರವಾಗಿ ಕಲಿಯುವ ಸಾಧ್ಯತೆಯೊಳಗಿರುವ DEVELOPMENT EDUCATION. ಕೇವಲ ಇದು ಕಲಿಸುವ ಶಿಕ್ಷಣವಲ್ಲ. ಕಲಿಯುವುದು ಮರೆಯುವುದಕ್ಕಲ್ಲ ಅನ್ನೋದಕ್ಕೆ ಸ್ಪಷ್ಟ ಪರಿಹಾರ ನೀಡಲಿದೆ. ಇದು ನಿಜ ಜ್ಞಾನ ಸಂಪಾದಿಸಿ ಉಳಿಸಲು ಸಾಧ್ಯವಾಗುವ ಶಿಕ್ಷಣ. ಕಳೆದುಕೊಂಡ ಪ್ರತಿಭೆ ಸಾಮರ್ಥ್ಯ ಪೂರ್ಣ ಮತ್ತೆ ಗಳಿಸಲು ಸಾಧ್ಯವಿರುವ **ಸ್ವಕಲಿಕೆಯ ಸ್ವರೂಪ ಶಿಕ್ಷಣ** ವಾಗಲಿದೆ.
8. ಇದು ಜ್ಞಾನ ಸಮಾನತೆಗೆ "Intellectual Excahnge Benefit Share" ಆಗಲಿರುವ ಜ್ಞಾನ ಭಾರತ ಶಿಕ್ಷಣ. ಕ್ರಮೇಣ ಈ ದೇಶದಲ್ಲಿ ಫೈಲ್, ದಡ್ಡರು ಅನ್ನೋ ಆರೋಪಗಳಿಗೆ ಅಸಮಾನತೆಗೆ ಕೊನೆ ಹೇಳಲು, ಕಲಿಯುವ ಹಕ್ಕನ್ನು ಮಕ್ಕಳ ಕೈಗೇ ಕೊಡಲು ಸಾಧ್ಯವಾಗುವ ಶಿಕ್ಷಣ. ಪ್ರತಿಯೊಂದು ಮಗು GENIUS, ಎಲ್ಲಾ ಮಕ್ಕಳು Extraordinary ಅನ್ನೋದನ್ನ ಸಾಧಿಸಿ ತೋರಿಸಲು ಆಧಾರವಿರುವ ಶಿಕ್ಷಣ.
9. ಮಾನವನು ದಿನದಲ್ಲಿ ಎಚ್ಚರವಾಗಿರುವ 16 ಗಂಟೆಗಳ thoughtsಗಳನ್ನು ಪೂರ್ಣ ಉತ್ಪಾದನೆಗೆ ಬಳಕೆ ಮಾಡಿ ದೇಶದಲ್ಲಿ ಜ್ಞಾನ ಸಮಾನತೆ ಹಾಗೂ ಆರ್ಥಿಕ ಸಮಾನತೆಯನ್ನೂ ತರಲು ಸಾಧ್ಯ ಇರುವ ಯೋಜನೆಯಾಗಿದೆ. ಇದು Multi task Education.




10. SWAROOPA NATIONAL DEVELOPMENT EDUCATION (SNDE)ದೇಶದ ಅಭಿವೃದ್ಧಿಗೆ (GST ಮತ್ತು ಉದ್ಯೋಗ ಸೃಷ್ಟಿ) ಬಹಳ ದೊಡ್ಡ ಕೊಡುಗೆಯಾಗಲಿದೆ. ದೇಹಾಭಿಮಾನ ಮತ್ತು ದೇಶಾಭಿಮಾನವೇ ಮುಖ್ಯ ಧ್ಯೇಯ ಮತ್ತು ಗುರಿಯಾಗಲಿದೆ. 11.ಒಟ್ಟಾರೆಯಾಗಿ ಇದು ಸಂತಸ ಸಂಭ್ರಮದ ಬದುಕಿನ ಶಿಕ್ಷಣ– JOYFUL LEARNING AND LIFE - EDUCATION.





ಸ್ವರೂಪದಲ್ಲಿ ಕಲಿತು MBBS, MD ಮಾಡಿದವರು ಇಂಜಿನಿಯರಿಂಗ್ RANK ತೆಗೆದುಕೊಂಡವರಿದ್ದಾರೆ. ಅಂದರೆ ಆದಿ ಸ್ವರೂಪ PRIVATE EXAM ಬರೆದರೂ ಸರ್ಟಿಫಿಕೇಟ್, ಉದ್ಯೋಗಕ್ಕೆ ಏನು ಸಮಸ್ಯೆ ಇಲ್ಲಾ ಅಂತ ಗೊತ್ತಾದ ಮೇಲೆನೇ 8ನೇ ತರಗತಿಗೆ ಮಗನನ್ನು ಸ್ವರೂಪಕ್ಕೆ ಕಳುಹಿಸಿದೆ. ಹತ್ತು ಹಲವು ವಿಶ್ವದಾಖಲೆಯೊಂದಿಗೆ ಎಲ್ಲಾ ಪದವಿಗಳಲ್ಲೂ ವಿಶೇಷ ಅಂಕ ಸಾಧನೆಗಳೊಂದಿಗೆ ಮಾದರಿಯಾಗುತ್ತಾನೆ ಎಂಬ ಭರವಸೆ ಈಗಾಗಲೇ ಕಂಡಿದ್ದೇನೆ.

–ವಸಂತ್ ಕುಮಾರ್ ಬೆಂಗಳೂರು, ಪೋಷಕರು

## Swaroopa National Development Education 10x10 ಯೋಜನೆ

**ಒಪ್ಪಿಕೊಂಡ ಒಂದು ಶಾಲೆಯ ಕಲಿಕೆ, ಫಲಿತಾಂಶ, ಪ್ರತಿಭೆ ಸಾಧನೆಗಳಲ್ಲಿ ಎಷ್ಟೊಂದು ಬದಲಾವಣೆ ಕಾಣಬಹುದು.**

### ಸ್ವರೂಪ ಶಿಕ್ಷಣ 'ಇದು ಅದಲ್ಲಾ'

**ONE SCHOOL ALL TALENTS**

**ಸ್ವರೂಪ ಶಿಕ್ಷಣ ಹೀಗಿದೆ. LKG ಯಿಂದ 10ನೇ ತರಗತಿವರೆಗೆ ನಿಮ್ಮ ಶಾಲೆಯಲ್ಲಿ 300 ಮಕ್ಕಳು ಇದ್ದಲ್ಲಿ ಅವರು ಹೀಗಾಗುತ್ತಾರೆ.**

**ನಿಮ್ಮ ಶಾಲೆಯ ಶಿಕ್ಷಕರು ಮಕ್ಕಳೆಲ್ಲರೂ ಸಾಧಕರಾಗಲೇಬೇಕೆಂದು ಬಯಸಿದ್ದೀರಾ? ಹಾಗಾದರೆ ಸ್ವರೂಪ ಶಿಕ್ಷಣ SNDE 10x10 ಯೋಜನೆಯನ್ನು ಪೂರ್ಣ ತಿಳಿದುಕೊಳ್ಳಿರಿ.**

**ಮುಂದಿನ ಅಕಾಡೆಮಿ ವರ್ಷದಿಂದ ಆರಂಭಿಸೋಣ SNDE 10x10 Memory Camp (ಏಪ್ರಿಲ್ ಮೇ 2025ರಲ್ಲಿ) 12 ದಿನಗಳ ತರಬೇತಿ ಶಿಕ್ಷಕರಿಗಾಗಿ, ಮಕ್ಕಳಿಗಾಗಿ ಮತ್ತು ಪೋಷಕರಿಗಾಗಿ.**

**ಮೊದಲ ಒಂದು ತಿಂಗಳು ಮಾನಸಿಕ ಸಿದ್ಧತೆಗಾಗಿ (Bridge Course ಎಂದೇ ತಿಳಿದುಕೊಳ್ಳೋಣ) ಹಿಂದಿನ ರೆಡಿಮೇಡ್ ವ್ಯವಸ್ಥೆಗಳಿಂದ ಬಿಡುಗಡೆಗಾಗಿ ಶಾಲೆಗಳಲ್ಲಿ ಹಬ್ಬಗಳನ್ನು ನಡೆಸಲಿದ್ದೇವೆ. ಈ ಕುರಿತು ಹೆಚ್ಚಿನ ಆಸಕ್ತಿ ಬೇಡಿಕೆ ಇದ್ದಲ್ಲಿ ತಿಳಿಸಿದ ಮೇಲ್ನೋಟದ ವಿಚಾರದಲ್ಲಿ ಅರ್ಥವಾಗದೆ ಗೊಂದಲ ಕುತೂಹಲ ಇದ್ದಲ್ಲಿ ಪೂರ್ಣ ತಿಳಿದುಕೊಳ್ಳುವ ಅವಕಾಶಕ್ಕಾಗಿ ಒಂದೆಡೆ ಸೇರಿಸಿ ಸಾಧ್ಯತೆಯನ್ನು ಸ್ಪಷ್ಟಪಡಿಸುತ್ತೇವೆ.**

1. **ಓದುವ ಹಬ್ಬ** : (ಒಂದು ವಾರ) ಸದ್ಯ ಪುಸ್ತಕಗಳಿಗಾಗಿ ಬೆಂಬಲವಾಗಲು ಪೂರಕ ಪುಸ್ತಕ ಓದುವುದು (ಮೊದಲು ಕೈಗೆ ಸಿಕ್ಕಿದ್ದು). ಸರ್ಟಿಫಿಕೇಟ್ ಪಡೆದುಕೊಂಡ ಮೇಲೆ ಈ ದೇಶದ 90% ಮಂದಿ ಮತ್ತೆ ಓದಲ್ಲ. ಹಾಗಾಗಿ ಮಕ್ಕಳಲ್ಲಿ ಓದುವ ಆಸಕ್ತಿ ತುಂಬಲಿ. ಓದುವ ಗುಣದವರ ಜೊತೆಗಿರಲಿ.
2. **ಬರೆಯುವ ಹಬ್ಬ** : (ಒಂದು ವಾರ) ಈ ದೇಶದ 90% ಮಂದಿಗೆ ಸ್ವಂತ ಸಾಹಿತ್ಯ ಬರಹದ ಶಕ್ತಿ ಇಲ್ಲ. ಯಾಕೆಂದರೆ ಅವರು ಬರೆಯುವ ಗುಣ ಸಾಮರ್ಥ್ಯದವರ ಜೊತೆ ಇರಲೇ ಇಲ್ಲ. ಮುಂದೆ ಇವರು ಫಲಿತಾಂಶದ ಬರಹ ಸಾಮರ್ಥ್ಯ ಪಡೆದುಕೊಳ್ಳಲಿದ್ದಾರೆ.
3. **ಗೀಚುವ, ಮಾತಾನಾಡುವ ಹುಡುಕಾಟದ ಹಬ್ಬ** : ಸುಮ್ಮನೆ ಗೀಚುವ Art (Creative Art) ಮೂಲಕ ಚಿತ್ರ ಬರೆಯುತ್ತಾ ಅದರೊಳಗೆ ಮುಳುಗಿ ಬಿಡುತ್ತಾರೆ. ಎಲ್ಲರೂ ಚಿತ್ರ ಕಲಾವಿದರು ಆಗಿಯೇ ಆಗಲಿದ್ದಾರೆ. ತಾಳ್ಮೆ ಏಕಾಗ್ರತೆ ಮುಂತಾದ 10 ಪ್ರಯೋಜನಗಳನ್ನು ಪಡೆದುಕೊಳ್ಳುತ್ತಾರೆ. ಎಂದೂ ಸುಮ್ಮನಿರಲಾರದೆ Multi Task ಮೂಲಕ ಹಲವು ಕಲಿಕೆಗಳನ್ನು ಜತೆ ಜತೆಗೆ ಬೆಳೆಸಿಕೊಳ್ಳುತ್ತಾರೆ. ಗೀಚಿದ ಚಿತ್ರಗಳ ಕುರಿತು ಮತ್ತು ಸುಮ್ಮನೆ ಮಾತಾಡುತ್ತ ಫಲಿತಾಂಶದ ಮಾತಿನ ಸಾಧ್ಯತೆ ಕಂಡುಕೊಳ್ಳುತ್ತಾರೆ (ಭಾಷಣ, ಬೋಧನೆ, ಸಲಹೆ, ಹೊರತುಪಡಿಸಿ) ಬಹಳ ಸೂಕ್ಷ್ಮವಾದ ಈ ಹುಡುಕಾಟದ ಹಬ್ಬ ಸಂಶೋಧಕರಾಗುವ ನೆಲೆಯಲ್ಲಿ ಎಲ್ಲರಿಗೂ ಸಿಗುವ ಚಟುವಟಿಕೆಗಳಾಗಿವೆ.
4. **ಕಾಡಲಿ ಶಿಕ್ಷಣ** : (ಒಂದು ವಾರ) ಅವಕಾಶ ಇದ್ದಲ್ಲಿ ಇದನ್ನು ಕಾಡಿನ ಮಧ್ಯೆ ಕೊಡುವ ಪರಿಸರ ಪ್ರೀತಿಯು ಆಗಿರಲಿದೆ. ಶಿಕ್ಷಣ ಅನ್ನೋದು ಯಾಕೆ ಬೇಕು ಅನ್ನೋ ಅರಿವು ಅವರ ಒಳಗಿನ ಬೇಡಿಕೆಯಾಗಿ ಅದು ಕಾಡುವಂತಿರಬೇಕು. ಈ ವಾರ ಪೂರ್ಣ ಜ್ಞಾನಪ್ರಜ್ಞಾ ವಿಧಿಯ ಚಟುವಟಿಕೆಗಳ ಅವಧಿಯಾಗಲಿದೆ ಈ ಸಮಯ ಸ್ವರೂಪ ಸಿದ್ಧಾಂತವಾದ–**ನಾನು ಯಾರು? ಎಲ್ಲಿದ್ದೇನೆ? ನಾನು ಏನು ಮಾಡುತ್ತಿದ್ದೇನೆ? ಎಲ್ಲಿಗೆ ಹೋಗುತ್ತಿದ್ದೇನೆ? ನಾನು ಏನನ್ನು ಕೊಂಡು ಹೋಗುತ್ತಿದ್ದೇನೆ–ಎಂಬ** ಸ್ವವಿಶ್ಲೇಷಣೆಯ ಅವಧಿಯಾಗಿದೆ.ಪಾಠ ಕಾಣುವ, ಕಂಡದ್ದು ಪೂರ್ಣನೆನಪಲ್ಲಿ ಉಳಿಸಿಕೊಳ್ಳುವ **ಎಲ್ಲಾ 10 ತಂತ್ರಗಳೂ** ಸಿದ್ಧಗೊಳ್ಳಲಿದೆ. ಈ ಎಲ್ಲಾ ಹಬ್ಬಗಳೂ ಸಂತಸ ಸಂಭ್ರಮದ ಮುಂದಿನ ಪೋರ್ಷನ್ ಹಬ್ಬಕ್ಕೆ ಬಿಡುಗಡೆಗೊಳ್ಳುವ ಸಿದ್ಧತೆಯ ಕ್ಷಣಗಳಾಗಲಿವೆ. ಇದೇ ಸಂದರ್ಭ ಸಮೂಹ ಮನೋವಿಜ್ಞಾನದ ಮೂಲಕ ಹತ್ತು ಗುಣಗಳನ್ನು ಗಮನಿಸಿ, ಪಡೆದುಕೊಳ್ಳುವ, ಹಸ್ತಾಂತರ ಮಾಡುವ ಪ್ರಕ್ರಿಯೆಯನ್ನು ಮೈಗೂಡಿಸಿಗೊಳ್ಳಲಿದ್ದಾರೆ.



ಮನಃಶಾಸ್ತ್ರದ ದಶಕಗಳ ಅಧ್ಯಯನ ಹಾಗೂ ಪ್ರಯೋಗದಿಂದ ವಿದ್ಯಾರ್ಥಿಗಳ ಸುಪ್ತ ಸಾಮರ್ಥ್ಯವನ್ನು ಮುನ್ನೆಲೆಗೆ ತರುವ ಪ್ರಯತ್ನ ಮಾಡುತ್ತಿದೆ ಸ್ವರೂಪ... ಜೀವನ ಪ್ರೀತಿ, ಮೌಲ್ಯಗಳನ್ನು ಒಳಗೊಂಡ ಸ್ವರೂಪಿಗಳು ಜಗತ್ತಿಗೇ ಕೊಡುಗೆಯಾಗಲಿದ್ದಾರೆ...ನನ್ನ 10 ತಿಂಗಳ ಮಗಳು ಸ್ವರೂಪದ ವಿದ್ಯಾರ್ಥಿ ಎಂಬುದು ನನ್ನ ಹೆಮ್ಮೆ...



ದೀಕ್ಷಿತಾ ಬಲ್ಯಾಯ ವರ್ಕಾಡಿ –ಉಪನ್ಯಾಸಕರು ಮಡಿಕೇರಿ.

**5. ಪೋರ್ಷನ್ ಹಬ್ಬ :** ನೆನಪಿನ ಹತ್ತು ತಂತ್ರಗಳನ್ನು ತಿಳಿದುಕೊಂಡಿರುವ ಶಿಕ್ಷಕರು–ಮಕ್ಕಳು ಕನಿಷ್ಠ ಅವಧಿಯಲ್ಲಿ (ಒಂದು, ಎರಡು ತಿಂಗಳು) ಪೋರ್ಷನ್ ಮುಗಿಸಿಕೊಳ್ಳುತ್ತಾರೆ Visual Memory Art ಮೂಲಕ ನೋಟ್ಸ್ ಮಾಡಿಕೊಳ್ಳುತ್ತಾರೆ. ನೆನಪಿನ ಇತರ ತಂತ್ರಗಳಲ್ಲಿ ಹಂಚಿಕೊಂಡ ಪಾಠಗಳಿಗೆ Model ಮಾಡಿ ಇತರರಿಗೆ ಪರಸ್ಪರ ಹಂಚಿಕೊಳ್ಳಲು ಸಿದ್ಧರಾಗುತ್ತಾರೆ.ತರಗತಿಯಲ್ಲಿ 30 ವಿದ್ಯಾರ್ಥಿಗಳಿದ್ದಲ್ಲಿ ಎಲ್ಲಾ Subject ನಿಂದ ಪ್ರತಿಯೊಬ್ಬರೂ ಒಟ್ಟು 6 ಪಾಠಗಳು ಮಾತ್ರ ಅವರ ಸಿದ್ಧತೆಯ ಪಾಲಾಗಿರಲಿದೆ. ನಂತರದ ದಿನಗಳ ಕಲಿಕೆ ವಿಧಾನವೇ Classroom study tour. ಇದು ಹಲವು ಸಾಧ್ಯತೆ, ಪ್ರತಿಭೆ ಹಾಗೂ ಸಾಮರ್ಥ್ಯಗಳನ್ನು ಹೆಚ್ಚಿಸಿಕೊಳ್ಳಲು ಅವಕಾಶ ಮಾಡಿಕೊಡುವಂತಾಗಲಿದೆ.
LKG, UKG ಯವರು 1ನೇ 2ನೇ ತರಗತಿಗೆ, 1ನೇ ತರಗತಿಯಿಂದ 3ನೇ ತರಗತಿಯವರೆಗೆ, 3ರಿಂದ 5ರವರೆಗೆ. 5 ರಿಂದ 7,8ರಿಂದ 10ನೇ ತರಗತಿಯವರೆಗೆ ನಿತ್ಯ ಒಂದು ಅಥವಾ ಎರಡು ಗಂಟೆಗಳ ಕಾಲ ಸಂಚಾರ ಮಾಡಲಿದ್ದಾರೆ. ಉದಾಹರಣೆ: 4ನೇ ತರಗತಿಯ 30 ವಿದ್ಯಾರ್ಥಿಗಳಲ್ಲಿ 10 ಮಂದಿ ತರಗತಿಯಲ್ಲಿ ಆ ದಿನ ಉಳಿದು 20 ಮಂದಿ 5,6,7,8 ತರಗತಿಗೆ ಹೋಗುತ್ತಾರೆ. ಅವರವರ ತರಗತಿಯಲ್ಲಿ ಸಿದ್ಧತೆ ಮಾಡಿಕೊಂಡ ಆ ಎಲ್ಲಾ ಪಾಠಗಳನ್ನು ನೆನಪಿನಲ್ಲಿ ಉಳಿಯುವಂತೆ ಕಾಣಿಸುತ್ತಾರೆ. ಅನಂತರ ಎಲ್ಲರೂ ಹಿಂದಕ್ಕೆ ತರಗತಿಗೆ ಬಂದು ಕಂಡದನ್ನು ಹಂಚಿಕೊಂಡು ದಾಖಲಿಸಿಕೊಳ್ಳುತ್ತಾರೆ. ಎಲ್ಲಾ ತರಗತಿಯವರೂ ಹಿಂದಿನ ತರಗತಿಗಳಿಗೂ ಸಂಚಾರ ಮಾಡಲಿದ್ದಾರೆ. ಹತ್ತನೇ ತರಗತಿಯವರು ಕೆಳಗಿನ ತರಗತಿಗಳಿಗೆ ಪೋರ್ಷನ್ ಮುಗಿಸುವ ಕಾರಣಕ್ಕೆ ಬಹಳ ಸಲ ರಿವಿಷನ್ ಮಾಡಿಕೊಳ್ಳುವಂತಾಗಲಿದೆ. ಚೆನ್ನಾಗಿ ನಿರ್ವಹಿಸಲಿರುವ ಶಿಕ್ಷಕರು ಅವರಲ್ಲಿರುವ ಜ್ಞಾನ ಅನುಭವ ಹಂಚಿಕೊಳ್ಳುತ್ತಾರೆ. ಮತ್ತು ಮಕ್ಕಳ ಜೊತೆ ಕಲಿಯುತ್ತಿರುತ್ತಾರೆ.
ಈ ಅವಧಿಗಳನ್ನು ಕಾಲಕ್ಕೆ ಮೂಡ್‌ಗೆ ತಕ್ಕಂತೆ ಹಬ್ಬದ ವಾತಾವರಣದಲ್ಲಿ ಪ್ರದರ್ಶಿಸಲಾಗುವುದು. ಅದೇ ದಿನದ ಪೋರ್ಷನ್‌ಗೆ ಅದೇ ಕ್ಷಣ –ದಿನದಂದು ಉತ್ತರಿಸಿ ಅಂಕಪಡಕೊಳ್ಳಲಿದ್ದಾರೆ. ನಿತ್ಯದ ಸಂಭ್ರಮ ದಾಖಲಿಸಿ ನಿತ್ಯದ ಕಲಿಕೆಯ development ಪೋಷಕರು ಕಾಣುವಂತೆ You tube channel ಮೂಲಕ ಪ್ರದರ್ಶನ ಮಾಡಲಾಗುವುದು.

**6. ನಿತ್ಯದ ಕಲಿಕಾ ಹಬ್ಬ :** ಸಾಧನೆ, ಶೋಧನೆ, ದಾಖಲೆ, ಪ್ರದರ್ಶನ ತಿಂಗಳು ತಿಂಗಳ ಮತ್ತು ವರ್ಷದ ಹಬ್ಬ. ಪೋರ್ಷನ್ ಮುಗಿದ ನಂತರ ನಿತ್ಯ ಎಲ್ಲಾ ಪಾಠಗಳನ್ನು ದಿನಕ್ಕೊಂದು ಬಾರಿ ಕಾಣಲು ಅವಕಾಶದ ತರಬೇತಿಯನ್ನು ಕೊಡಲಾಗುವುದು. ಓದು ಬರಹ ಬಾರದೆ ಬಾಷೆಯ ಕಲಿಕೆಯಲ್ಲಿ ಹಿನ್ನಡೆ ಇರುವವರಿಗೆ (Slow learners) ಇನ್ನಷ್ಟು ಚಟುವಟಿಕೆಗಳ ಮೂಲಕ ಕೊರತೆಗಳನ್ನು ಭರ್ತಿ ಮಾಡಿಕೊಳ್ಳಲಾಗುವುದು. ವಿಶ್ವ ದಾಖಲೆಗಾಗಿ ಎಲ್ಲರೂ ಒಂದಷ್ಟು ಅಭ್ಯಾಸ ಮತ್ತು ಚಟುವಟಿಕೆಗಳಲ್ಲಿ ಸದಾ ತೊಡಗಲಿದ್ದಾರೆ. ನಿತ್ಯ ಯುಟ್ಯೂಬ್ ಪ್ರದರ್ಶನ ಇರಲಿರುವ ಕಾರಣ ನಿತ್ಯದ ಹಬ್ಬದಲ್ಲಿ ಎಲ್ಲರೂ ಸ್ಪರ್ಧಾತ್ಮಕವಾಗಿ ಪಾಲ್ಗೊಳಲಿದ್ದಾರೆ.



**7. SNDE 10x10 ನಿತ್ಯದ Study tour chart :** ABCD 4 ವಿಭಾಗಗಳಲ್ಲಿ ಪ್ರತಿಭೆ ಸಾಮರ್ಥ್ಯ ಗುಣ ಬದಲಾಯಿಸಿಕೊಂಡು ಅವುಗಳನ್ನು ಸ್ಥಿರ ಮಾಡಿಕೊಳ್ಳುವುದಕ್ಕೆ ಇದು ಸಹಾಯವಾಗಲಿದೆ.
Study tour SNDE 10x10 ಪೋರ್ಷನ್ ಹಬ್ಬ ಮುಗಿದ ನಂತರವೇ ಆರಂಭವಾಗಲಿದೆ.

A. Attitude B. Brain Skill development C. Memory development Alertness
D. Subject and Self study.

ಒಟ್ಟಾರೆ ಈ ನಾಲ್ಕು ವಿಭಾಗಗಳಲ್ಲಿ 58 ವಿಷಯಗಳನ್ನು ಹೊರೆಯಿಲ್ಲದೆ ಸಂಭ್ರಮದಿಂದ ಗಮನಿಸಿ ಅನುಭವಿಸಲಿದ್ದಾರೆ. ಇದಕ್ಕಾಗಿ ನಿತ್ಯ ಸಾವಿರಾರು ಅಂಕಗಳನ್ನು ಪಡೆದುಕೊಳ್ಳುತ್ತಾರೆ. ಕ್ಷಣ ಕ್ಷಣ ನೆನಪಿನ ಜಾಗೃತಿ ಇಲ್ಲಿನ ಮುಖ್ಯ ಉದ್ದೇಶವಾಗಿದೆ.

ಸ್ವರೂಪ ಶಿಕ್ಷಣ ಸಣ್ಣ ಮಗುವಿನಿಂದಲೇ ಆರಂಭವಾದಾಗ ಒಂದು ಅಪಾರ ಸಾಮರ್ಥ್ಯದ ಹೊಸ ಜನರೇಶನ್ ಅಲ್ಲಿಂದಲೇ ಸೃಷ್ಟಿಯಾದೀತು.



–ಡಾ। ರಾಜ್‌ಕುಮಾರ್, ಸ್ವರೂಪ ಹಿತೈಷಿಗಳು

# ಸ್ವರೂಪ ಶಿಕ್ಷಣ ಶಾಲೆ –ಸಾಧ್ಯತೆಯ ಕ್ರಾಂತಿ

ಪೂರ್ಣ ಸಾಧ್ಯತೆಯನ್ನು ಒಪ್ಪಿಕೊಂಡಾಗ ಎಲ್‌ಕೆಜಿಯಿಂದ 10ನೇ ತರಗತಿ ವರೆಗಿನ 12 ವರ್ಷಗಳ ಶಾಲಾ ಅವಧಿಯಲ್ಲಿ ಎಲ್ಲಾ ಮಕ್ಕಳು ಅದ್ಭುತ ಸಾಧಕರು.

**ಇದನ್ನು ಒಪ್ಪಿಕೊಂಡವರಿದ್ದಾರೆ. ಪ್ರಯೋಗ ಮಾಡಿದ್ದಾರೆ. ಒಪ್ಪಿಕೊಂಡವರಿಗೂ ಇನ್ನಷ್ಟು ಬೆಂಬಲ ಬೇಕಾಗಿದೆ.**

ಪೂರ್ಣ ಸ್ವರೂಪ ಶಿಕ್ಷಣವನ್ನು ಒಪ್ಪಿಕೊಂಡ ಶಾಲೆಯಲ್ಲಿ ಅಧ್ಯಯನ ಕ್ರಮದಂತೆ ಸಾಗಿದಾಗ ಈ ಫಲಿತಾಂಶ ಸಿಗಲೇಬೇಕಾಗಿದೆ. ಇದು ಸಿದ್ಧ ಮಾದರಿ ಅಲ್ಲ. ಸಂಶೋಧನಾ ಆಧಾರಿತ ಹಿರಿಯ ತಾಕತ್ತಿನ ಗೆಲುವಿನ ದಾಖಲೆ.

ಓದುವ ಹಬ್ಬ, ಬರೆಯುವ, ಗೀಚುವ, ಮಾತನಾಡುವ, ಕಾಡಲಿ ಶಿಕ್ಷಣ ಮತ್ತು ಪೋರ್ಷನ್ ಹಬ್ಬಗಳು ಮುಗಿದ ನಂತರ ಮಕ್ಕಳು ಓದಿದ್ದನ್ನು ಜ್ಞಾನ ನಿಧಿಯಾಗಿ ಉಳಿಸಿಕೊಳ್ಳುತ್ತಾ, ಸ್ವಕಲಿಕೆ ಸಾಧನೆಗೆ ಶಿಕ್ಷಕರು, ಸಾಧಕರು, ಸಂಶೋಧಕರ ಜತೆಗೆ ಸ್ವಕಲಿಕಾ ಸಂಭ್ರಮದಲ್ಲಿ ಇರುತ್ತಾರೆ.

### ಇದು ಬೇಡಿಕೆಯ ಕಾಲ

ಸಾಧ್ಯತೆಗಳ ಸತ್ಯ ಎಲ್ಲೋ ಅಡಗಿದೆ. ಸ್ವರೂಪ SNDE ಶಿಕ್ಷಣದಲ್ಲಿ ಎಲ್ಲಾ ಸಾಧ್ಯತೆಗಳೂ ಪರಿಹಾರಗಳೂ ಅಡಕವಾಗಿದೆ. ಒಪ್ಪಿಕೊಂಡ ಫಲಿತಾಂಶದ ಸತ್ಯ ಸಮೂಹದ ಬಾಯಿಂದ ಬಿತ್ತರವಾಗಲಿ. ಪ್ರಥಮ ಮತ್ತು ಅಂತಿಮ ಪೋಷಕರ ನಿರ್ಧಾರವೇ ದೇಶದ ಗೆಲುವು.

ಇದು **ಆಗಲೇಬೇಕಾದ್ದು ಅಲ್ವೇ**

**SWAROOPA NATIONAL DEVELOPMENT EDUCATION**

## 300 ಮಕ್ಕಳಿರುವ ಶಾಲೆಯಲ್ಲಿ ಅಂದಾಜು ಏನು ಸಾಧಿಸ್ತಾರೆ ನೋಡೋಣ.

1. ಎಲ್ಲರೂ ಕಲಾವಿದರಾಗುತ್ತಾ ಹತ್ತು ಗುಣ ಸಾಮರ್ಥ್ಯ ಬೆಳೆಸಿಕೊಳ್ಳುತ್ತಾರೆ. ಗುಂಪು, ಕಲಾ ಪ್ರದರ್ಶನ ಮತ್ತು ವೈಯುಕ್ತಿಕ ಕಲಾ ಪ್ರದರ್ಶನ ಎಲ್ಲರೂ ಮಾಡಲಿದ್ದಾರೆ. ವರ್ಷಕ್ಕೆ ಕನಿಷ್ಠ 100 Painitng. 300 x 100 x 10 year= 3 ಲಕ್ಷ ವರ್ಷ ಚಿತ್ರಗಳು ದೇಶದಾದ್ಯಂತ ಪ್ರದರ್ಶನ ಕಾಣಲಿದೆ.
2. ಪಾಠಗಳೆಲ್ಲವೂ, ನೆನಪಿನ 10 ತಂತ್ರಗಳಲ್ಲಿ ಸಾಗುವ ಕಾರಣ ನೃತ್ಯ, ಸಂಗೀತ, Model, ಶಿಲ್ಪ, ನಾಟಕ, ಮೂಕಾಭಿನಯ, ಮಿಮಿಕ್ರಿ, ಬೀಟ್ ಬಾಕ್ಸ್ ನಿತ್ಯದ ಅಭ್ಯಾಸವಾಗಿ, ನಿತ್ಯ ಪ್ರದರ್ಶನವಾಗಲಿರುವ ಕಾರಣ ಸಾವಿರಾರು ಪ್ರದರ್ಶನ ನೀಡಲಿರುವ You tube channel ವ್ಯವಸ್ಥೆಯೊಳಗೆ ಸದಾ ಸುದ್ದಿಯಲ್ಲಿರುತ್ತಾರೆ.
3. ಪ್ರತೀ ವರ್ಷ ಪೋಷಕರು, ಬಂಧುಗಳ ಸಹಕಾರದಿಂದ ಮಕ್ಕಳು ಸ್ವರೂಪ ಶಿಕ್ಷಕರು ಕೊಟ್ಟಿರುವ ವಿಷಯಗಳಲ್ಲಿ ಕನಿಷ್ಠ ಸಾವಿರ ಸಾಮಾನ್ಯ ಜ್ಞಾನ ಸಂಗ್ರಹಿಸಿಕೊಳ್ಳಬೇಕಾದ ಅಗತ್ಯವಿದೆ. 1000x300=3ಲಕ್ಷ ಸಾಮಾನ್ಯ ಜ್ಞಾನ, ನೆನಪಿನ ತಂತ್ರ ಮತ್ತು ಕಲಿಕಾ ಸಂಭ್ರಮದಲ್ಲಿ ಎಲ್ಲರೂ ಉಳಿಸಿಕೊಳ್ಳುತ್ತಾರೆ ಮತ್ತು ಪರಸ್ಪರ ಪ್ರತಿ ಮಕ್ಕಳ ಪೋಷಕರು ಅಥವಾ ಮಕ್ಕಳ ಹೆಸರಲ್ಲಿ ಪುಸ್ತಕಗಳು 20 ಭಾಷೆಗಳಿಗೆ ಮುದ್ರಣವಾಗಲಿವೆ ಮತ್ತು ಆದಾಯ ಹಂಚಿಕೆಯಾಗಲಿದೆ.
4. ಕಥೆ, ಕವನ, ಲೇಖನಗಳನ್ನು ನಿತ್ಯ ಬರೆಯಲೇಬೇಕಾಗಿದೆ. ನಿತ್ಯ ಫಲಿತಾಂಶದ ಮಾತಿನ ಪತ್ರ ಬರೆಯಬೇಕಾಗಿದೆ. ಕಾಣುವುದನ್ನು ಸಹಜ ಭಾಷೆಗೆ ವಿಸ್ತರಿಸಬೇಕಾಗಿದೆ. ಪ್ರತಿಯೊಬ್ಬರಿಂದಲೂ ರಚಿತವಾದ ಸಾವಿರಾರು ಬರಹಗಳನ್ನು ಒಂದೆಡೆ ಸೇರಿಸಿ ಪುಸ್ತಕ ಪ್ರಕಟಿಸಬಹುದಾಗಿದೆ.
5. ಪಠ್ಯಪುಸ್ತಕದ ಎಲ್ಲಾ ಪಾಠಗಳನ್ನು ಒಂದು ವಾಕ್ಯದ ಪ್ರಶ್ನೆಯಾಗಿ ಸಾಮಾನ್ಯ ಜ್ಞಾನಕ್ಕಾಗಿ ನೆನಪಿನ ತಂತ್ರದಲ್ಲಿ ಸಿದ್ಧಪಡಿಸುವುದು. ಅದೇ ರೀತಿಯಲ್ಲಿ ಆ ಪಾಠಗಳಿಗೆ ತಕ್ಕ ಪೂರಕ ಸಾಮಾನ್ಯ ಜ್ಞಾನಕ್ಕಾಗಿ ಸಂಗ್ರಹಿಸುವುದು. ದೇಶದ ಎಲ್ಲಾ ಭಾಷೆಗಳಿಗೂ, ಪ್ರದೇಶದ ಎಲ್ಲಾ ಕೋರ್ಸುಗಳಿಗೂ ಸಿದ್ಧಪಡಿಸಿದ ಜ್ಞಾನವನ್ನು ಹಂಚಿಕೊಳ್ಳುವುದು. ಎಲ್ಲಾ ಪಠ್ಯ ವಿಷಯಗಳನ್ನು ನೆನಪಿನ ಸೂತ್ರದಲ್ಲಿ Pocket Diaryಯಾಗಿ ಸಿದ್ದಪಡಿಸುವುದು. ಇವೆಲ್ಲವೂ ನೆನಪಲ್ಲಿ ಸದಾ ಉಳಿಯುವಂತೆ ತಂತ್ರ ಬಳಕೆಯೊಂದಿಗೆ ಪುಸ್ತಕ ರೂಪದಲ್ಲಿ ಬರಲಿವೆ. ಎಲ್ಲಾ ತರಗತಿಯ ಪಠ್ಯ ಎಲ್ಲರಿಗೂ ಸಾಮಾನ್ಯ ಜ್ಞಾನವನ್ನು ಸಿಗಲಿದೆ. ಉದಾ.: CBSE, ICSE, State Syllabus ಪಠ್ಯ ಜ್ಞಾನ ಪರಸ್ಪರ ಎಲ್ಲರಿಗೂ ಹಂಚಿಕೆಯಾಗಲಿದೆ. ಸ್ವರೂಪ ಶಿಕ್ಷಣ Multitaskನ ಪರ್ಯಾಯ ಹೊಂದಾಣಿಕೆಯಿಂದ ಸಿಗಲಿದೆ.



6. ಗಣಿತ ಅಧ್ಯಯನ ನಿತ್ಯ ತರಗತಿಯ ಎಲ್ಲಾ ಶಿಕ್ಷಕರಿಂದಲೂ ಕೇವಲ ಪಠ್ಯ ಜ್ಞಾನ ಪರೀಕ್ಷೆಗೆ ಮಾತ್ರವಲ್ಲದೆ ಹಂಚಿಕೆಯಾಗಲಿದೆ. ಪ್ರತಿದಿನ ಮನೆಯಿಂದ ಬರುವಾಗ ಸಿಂಪಲ್ಲಾದ 10ಲೆಕ್ಕ ಪ್ರಶ್ನೆಯಾಗಿ (ಪೋಷಕರ ಸಹಾಯದಿಂದಲಾದರೂ ಸರಿ) ತರಬೇಕಾಗಿದೆ. ಕೂಡಿಸು, ಗುಣಿಸು,

**Formal School ಸರ್ಟಿಫಿಕೇಟ್ ಮುಖ್ಯ ಅಚಿತ ಪೋಷಕರಿಗೆ ಹೆದರಿಸುವವರು ಇರಬಾರದು. ಅವರಿಲ್ಲದಿದ್ದರೆ ಸಾಧಕ ಮಕ್ಕಳ ಸಂಖ್ಯೆ ಹೆಚ್ಚಾದೀತು. ಸರ್ಟಿಫಿಕೇಟ್‌ಗಾಗಿ ಶಿಕ್ಷಣ ಎಷ್ಟು ವರ್ಷ ಎಲ್ಲರ ಬದುಕಿನ ಸಾಮಥ್ಯ ತರಗತಿಗಳಲ್ಲಿ ಲೂಟಿಮಾಡುತ್ತಿದೆ. ಸಾಮರ್ಥ್ಯದ ಶಿಕ್ಷಣಈ ದೇಶಕ್ಕೆ ಬೇಕು. Portion ಮುಗಿಸುವ ವಿಧಾನ ಮತ್ತು ಪೀರೆಡ್ ಬೆಲ್ ಬದಲಾದರೆ ಸಾಕು, ಎಲ್ಲಾ ಸರಿಹೋಗುತ್ತದೆ ಸ್ವರೂಪ ಶಿಕ್ಷಣದಿಂದ. ಇದು ಸಾದ್ಯ ಅಂತ ನಾನು ಕಂಡಿದ್ದೇನೆ. ಸ್ವರೂಪದಲ್ಲಿರುವ ನನ್ನ ಮಗಳು ಭವಿಷ್ಯ ಹಾಳು ಮಾಡಿಕೊಂಡಿಲ್ಲ. 10 ವಿಶ್ವದಾಖಲೆಯೊಂದಿಗೆ ಶ್ರೇಷ್ಠ ಪದವಿ ಮಾಡಲು ಅರ್ಹತೆ ಸ್ವರೂಪದಿಂದ ಪಡಕೊಂಡಿದ್ದಾಳೆ.**



**–ಕೃಷ್ಣವೇಣಿ, ಸುಳ್ಯ ಸ್ವರೂಪ ಟ್ರಸ್ಟಿ ಪೋಷಕರು**

ಭಾಗಿಸುವ ಬದುಕಿನ ಅಗತ್ಯ ವ್ಯವಹಾರದ ಬುದ್ಧಿ ಚುರುಕಾಗಲು, ಸಹಾಯವಾಗಲು ಲೆಕ್ಕವನ್ನು ನಿತ್ಯ ಎಲ್ಲಾ ಶಿಕ್ಷಕರು ಹಂಚಿಕೊಂಡು ಜ್ಞಾನದ ಕೊರತೆ ಪರಿಹರಿಸಿಕೊಳ್ಳಬೇಕಾಗಿದೆ. 300x10x300 ದಿನ . ಕನಿಷ್ಠ ೯ ಲಕ್ಷ ಲೆಕ್ಕ ಶಾಲೆಗಳಿಗೆ ಸದಾ ಸಂಚರಿಸುವ ಸಂಭ್ರಮಿಸುವ ಶಿಕ್ಷಣವಾಗಲಿದೆ.

7. Portion ಒಂದೆರಡು ತಿಂಗಳಲ್ಲಿ ಮುಗಿದಿರಲು ನಿತ್ಯ ಒಂದು ಸಲ ಅವೆಲ್ಲವನ್ನೂ ಸ್ಮರಣೆಗೆ ತಂದುಕೊಂಡು, ಉಳಿದ ಸಮಯ ವೈಯಕ್ತಿಕ ಸಾಧನೆಗೆ ಎಲ್ಲರೂ ಸ್ಪರ್ಧಾತ್ಮಕವಾಗಿ ತಮ್ಮನ್ನು ತಾವೇ ತೊಡಗಿಸಿಕೊಳ್ಳುತ್ತಾರೆ. 50 ವಿಷಯಗಳು ನಿತ್ಯ ಗಮನಕ್ಕೆ ಬಂದು ಅಭ್ಯಾಸವಾಗಿ ಹೋಗಲಿರುವುದು ವಿಶೇಷವಾಗಿದೆ. ವಿಶ್ವ ದಾಖಲೆಗೆ 10 ವಿಷಯಗಳು ಅಭ್ಯಾಸಕ್ಕೆ ಜೊತೆಗೆ ಇರಿಸಿಕೊಂಡು ಸಾಧನೆ ಸಂಪಾದನೆಗೆ ಸಿದ್ದರಾಗುತ್ತಾರೆ. ಸರಾಸರಿ ವರ್ಷಕ್ಕೆ ಒಂದೆರಡು ದಾಖಲೆ ಆಗಬಹುದು ಅಥವಾ ವರ್ಷಕ್ಕೆ 100 ಮಂದಿಗೆ ಒಂದೊಂದು ದಾಖಲೆ ಯಾಕಾಗಲ್ಲ ಅನ್ನೋದಕ್ಕೆ ಉತ್ತರವಿದೆ.

೮. ಮಕ್ಕಳು SNDE 10x10 ಯೋಜನೆಯ ಶಿಕ್ಷಣದಲ್ಲಿ ನಿತ್ಯ ಸಾವಿರಾರು ಅಂಕ ಪಡೆದುಕೊಳ್ಳುತ್ತಾರೆ WWWHKST 6 Banks ನೊಳಗೆ ಮುಂದೊಂದು ದಿನ ಅಕೌಂಟನಲ್ಲಿ ಸೇರಿ ಗಳಿಕೆ ಸಂಪಾದನೆಯಾಗಿ ಸಿಗಲಿದೆ. ನಿತ್ಯದ ದುಡಿಮೆಗೆ ಗೌರವ ಪ್ರಶಂಸೆ ಜೊತೆಗೆ ಅದು ಸರ್ಟಿಫಿಕೇಟ್ ಆಗಿ ಸಂಗ್ರಹವಾಗಲಿದೆ. ಉನ್ನತ ಶಿಕ್ಷಣಕ್ಕೆ ಎಲ್ಲಾ ಆರು ಬ್ಯಾಂಕುಗಳು ಸಹಾಯ ನಿಧಿಯಾಗಲಿದೆ.

೯. ಜ್ಞಾನಭಾರತ SNDE 10x10 ಯೋಜನೆಯ ನಿತ್ಯ ಹತ್ತು ವಿಷಯದೊಳಗೆ ಹತ್ತತ್ತು ವಿಷಯ ಅಭ್ಯಾಸ ಮಾಡಲಿದ್ದಾರೆ. ಉದಾ:– ಹತ್ತು ಅಥವಾ ಇಪ್ಪತ್ತು ಭಾಷೆ. ಒಂದೊಂದು ಅಕ್ಷರ, ಪದ, ಮಾತು ಬಳಕೆ ನಿತ್ಯ ಮಾಡಲಿದ್ದಾರೆ. ಎರಡು ಕೈಗಳ ಮೂಲಕ ಬರೆದು, ಕೈಬರಹದ ದೋಷ, Spelling ಸರಿಪಡಿಸಿಕೊಂಡು ಸುಂದರ ಕೈಬರಹದ ಪ್ರತಿಭೆ ಹಾಗೂ ಸಾಮರ್ಥವನ್ನು ಹೆಚ್ಚಿಸಿಕೊಳ್ಳುತ್ತಾರೆ. ಇದಕ್ಕೆ ಪೂರಕವಾಗಿ ಹತ್ತು ಹಲವು ಚಟುವಟಿಕೆಗಳಲ್ಲಿ ಸದಾ ಅಭ್ಯಾಸ ನಿರತರಾಗಿರುತ್ತಾರೆ. ಜಗ್ಲಿಂಗ್, ರೂಬಿಕ್‌ಕ್ಯೂಬ್, ಸ್ಪೀಡ್‌ಸ್ಟಾಕ್, ಚೆಸ್, ಒರಿಗಾಮಿ ಆಟ ಇನ್ನಷ್ಟು ಹುಡುಕಾಟದ ಕಡೆಗೆ ಸಾಗುತ್ತಾರೆ. ಯಾವ ವಿದ್ಯಾರ್ಥಿಯೂ ಪಡಕೊಂಡ ಜ್ಞಾನಪ್ರತಿಭೆ ಮತ್ತೊಬ್ಬರಿಗೆ, ಜೊತೆಗಾರರಿಗೆ ಹಂಚಿಕೊಳ್ಳದಿರಲಾರರು. ಇದು ಮುಖ್ಯವಾಗಿ Intellectual Exchange benefit share ಯೋಜನೆಯಾಗಿದೆ.

10. ಬದುಕಿನ ಎಲ್ಲಾ ಸ್ಥಳಗಳ ಅನುಭವ ಶಿಕ್ಷಣಕ್ಕಾಗಿ ತನ್ನ ಮನೆಗೆ ಅಗತ್ಯ ಬೇಕಾಗಿರುವ ಶಿಕ್ಷಣ ಪ್ಲಂಬರ್, Electrical ರಿಪೇರಿಗಳು ಗಾರೆ ಟೈಲರಿಂಗ್, ಸ್ವಿಮ್ಮಿಂಗ್, ಅಡುಗೆ ಪಾಕ, ಕೃಷಿ, ಪರಿಸರ ಪ್ರೀತಿ, ರಕ್ಷಣಾ ಜಾಗೃತಿ ವಿಷಯಗಳು ಶಿಸ್ತು, ಸ್ವಚ್ಛತೆ, ಈ ನೆಲದ ಪ್ರೀತಿ–ಎಲ್ಲವನ್ನೂ ಬೆಳೆಸಿಕೊಳ್ಳಲಿದ್ದಾರೆ.

11. ನೂರಾರು, ಸಾವಿರಾರು ವಿಜ್ಞಾನಿಗಳನ್ನು, ಸಾಧಕ ಗಣ್ಯರನ್ನು ಭಾವನಾತ್ಮಕವಾಗಿ ಮುಟ್ಟುವುದಕ್ಕೆ SNDE ಸಂಚಾರಿ ಶಿಕ್ಷಣ ಸಹಾಯಕವಾಗಲಿದೆ. ಆ ಎಲ್ಲಾ ಸಾಧಕರ ಸಾಧನೆಯೇ ಈ ಮಕ್ಕಳಿಗೆ ಪ್ರೇರಣೆಯಾಗಲಿ. ಮಕ್ಕಳು, ಸಾಧಕರು, ಶೋಧಕರು ಹಾಗೂ ಕಲಿಯುವವರ ಜೊತೆಗಿರಲಿ. ಅವರು ಕೇವಲ ಸರ್ಟಿಫಿಕೇಟ್‌ಗಾಗಿ 20 ವರ್ಷಗಳನ್ನು ಸಾಮರ್ಥ್ಯ ಇಲ್ಲದೆ ಕೊಲ್ಲುವವರಾಗದಿರಲಿ. ಹಿರಿಯರಿಂದ ರೂಪಿತಗೊಂಡ ವ್ಯವಸ್ಥೆಗಳು ಮಕ್ಕಳಲ್ಲಿ ಸಾಮರ್ಥ್ಯದ ಕೊರತೆ ಉಂಟು ಮಾಡದಿರಲಿ ಇದುವೇ ಸ್ವರೂಪ.



**ಮನಸ್ಸುಗಳ, ಅಂತರಂಗದ ಚಳುವಳಿಕಾರ**
**ಸಾಹಿತಿ–ಶಿಕ್ಷಣ ಚಿಂತಕ**

**ಶಿಕ್ಷಣ ಕ್ರಾಂತಿಯ ಮಹತ್ವದ ಹೆಜ್ಜೆ ಸ್ವರೂಪ ಅಧ್ಯಯನ ಪ್ರವಾಸ. ಭವಿಷ್ಯದ ಭಾರತದ ಮುನ್ನೋಟಕ್ಕಾಗಿ ಸಾಗಿ ಬರುತ್ತಿರುವ ಸ್ವರೂಪ ಅಧ್ಯಯನ ಕಲಿಕಾ ಪ್ರವಾಸವನ್ನು ನಾವೆಲ್ಲರೂ ಸ್ವಾಗತಿಸೋಣ.**
**ನಮ್ಮ ಮಕ್ಕಳ ಶಿಕ್ಷಣದ ಭದ್ರ ಬುನಾದಿಗಾಗಿ ಮೌಲ್ಯಯುತ ಸಮಾಜ ಕಟ್ಟಲು ಹೊರಟಿರುವ ಸ್ವರೂಪ ಪ್ರವಾಸದ ಜತೆ ನಾವೂ ಸಾಗೋಣ.**

**ವಿವೇಕಾನಂದ ಎಚ್.ಕೆ.ಬೆಂಗಳೂರು**

# ಕಲಿಕೆ ಸಾಧನೆ-ಶೋಧನೆಯಲ್ಲಿರುವ ಸ್ವರೂಪದ ಗುರುಗಳು ಹಾಗೂ 10 ವಿದ್ಯಾರ್ಥಿಗಳಿಗೆ ಏನೇನು ಗೊತ್ತು ?

1. **General knowledge Package -ವಿಶ್ವದಾಖಲೆ ಮಾಡಿದ್ದಾರೆ.**
   ಲೋಕಲ್ -ಲೋಕಲ್ ಜ್ಞಾನ, ಪಠ್ಯ ಜ್ಞಾನ, ನಿತ್ಯ ಜ್ಞಾನ, ತತ್ವ ಜ್ಞಾನ, ಕರ್ನಾಟಕದ 240 ತಾಲೂಕುಗಳು, 784 ಜಿಲ್ಲೆಗಳ ಹೆಸರುಗಳು, 64 ವಿದ್ಯೆಗಳು,, 60 ಸಂವತ್ಸರಗಳು,. 101 ಕೌರವರು , ಮುಂತಾದ ನೂರಾರು Package ಪೂರ್ಣ ನಿರರ್ಗಳವಾಗಿ ಹೇಳಲು ಸಾಧ್ಯವಾಗುವುದು.

2. **ಶೋಡಷ ಅವಧಾನ -ವಿಶ್ವದಾಖಲೆ ಮಾಡಿದ್ದಾರೆ.**
   ಏಕಕಾಲಕ್ಕೆ 16 ಮಂದಿ ಹೇಳಿದ್ದ 16 ವಿಷಯಗಳನ್ನು, ಕಾಣಿಸಿದ್ದನ್ನು ಗಮನಿಸಿ ನೆನಪಿಟ್ಟುಕೊಳ್ಳುವುದು-ಈ ಮಧ್ಯೆ ಒಂದು ಪಾಠ ಓದಿ ಅದಕ್ಕೆ ಚಿತ್ರದ ಮೂಲಕ ನೋಟ್ಸ್ ಬರೆಯುತ್ತಿರಬೇಕು. ಕೈಯಲ್ಲಿ ಕಲ್ಲೆಕಾಳು ಎಣಿಸುತ್ತಾ ರುಬಿಕ್ ಕ್ಯೂಬ್ ಬಣ್ಣ ಹೊಂದಿಸಿಕೊಂಡು, ಕೈಗಳಿಗೆ ಒಟ್ಟು 5 ಕೆಲಸಗಳನ್ನು ಕೊಡುತ್ತಾ, ಕೊನೆಗೆ 20 ನಿಮಿಷದಲ್ಲಿ ಎಲ್ಲವನ್ನೂ ನೆನಪಿಸಿ, ಹಿಂಪಡೆಯುವ ಪ್ರತಿಭೆಗಳ ಅದ್ಭುತ ಪ್ರದರ್ಶನ.

3. **ಸ್ವರೂಪ ಅಂತರ್‌ದೃಷ್ಟಿ ಪ್ರದರ್ಶನ**
4. ಮನೋವಿಜ್ಞಾನ – ವರ್ಣ ಮನೋವಿಜ್ಞಾನ
5. ತತ್ವ – ಸಿದ್ಧಾಂತ
6. ರಾಮಾಯಣ ಮಹಾಭಾರತ
7. ಭಗವದ್ಗೀತೆ
8. ಯೋಗ ಪ್ರಾಣಾಯಾಮ ಧ್ಯಾನ ಮುದ್ರೆ
9. **ಸಂಕೇತ ಭಾಷೆ – 40**
   ಕೈಯ ಮೂಲಕ ಮೊಬೈಲ್ ನಂಬರ್ ಮತ್ತು ಹೆಸರು ಅಥವಾ ಯಾವುದೇ ವಿಷಯ ಹೇಳಿಕೊಂಡು ನೆನಪಿಟ್ಟುಕೊಳ್ಳುವ ಚಟುವಟಿಕೆ ಉದಾ: ಕಣ್ಣಿನ ಚಲನೆ, ನಗು, ಮುಖದ ಭಾವ, ಮುದ್ರೆ, ಚಪ್ಪಾಳೆ, ಬೆರಳುಗಳು, ಸಂಖ್ಯೆಗಳು, ಚಿತ್ರಗಳ ಮೂಲಕ ವ್ಯಕ್ತಪಡಿಸುವುದು. ಎಲ್ಲವೂ ಬ್ರೈನ್‌ಸ್ಕಿಲ್ ಡೆವೆಲೆಪ್‌ಮೆಂಟ್ ಆಕ್ಟಿವಿಟೀಸ್.
10. 10 ನೆನಪಿನ ತಂತ್ರಗಳು
11. ಸಂಗೀತ- ಶಾಸ್ತ್ರೀಯ -ಕರ್ನಾಟಕ ಹಿಂದುಸ್ತಾನಿ ಭಾವಗೀತೆ, ರಂಗಗೀತೆ, ಜಾನಪದ
12. ಪಠ್ಯ ಪ್ರಶ್ನೋತ್ತರ – ಗೀತೆಗಳು
13. 20 ಬಾಷೆಗಳ ಕಲಿಕೆ (7 ವಿದೇಶಿ)
14. ಎರಡು ಕೈಗಳಿಂದ ಬರಹ (20 ರೀತಿ)
15. ಪಠ್ಯ ಜ್ಞಾನ -8ನೇ ತರಗತಿಯವರಿಂದ 10ನೇ ತರಗತಿ ಪಠ್ಯ ಜ್ಞಾನ ಪ್ರದರ್ಶನ-ಕೈಭಾಷಿ-ಮೆಕೆಭಾಷಿ ಪ್ರದರ್ಶನ
16. ಜಾಣ್ಮೆ ಲೆಕ್ಕ, ವ್ಯವಹಾರಿಕ ಲೆಕ್ಕ, ಬೌದ್ಧಿಕ ಸಾಮರ್ಥ್ಯ-ಗಣಿತ
17. ಯಕ್ಷಗಾನ-ತೆಂಕು-ಬಡಗು
18. ಮೂಕಾಭಿನಯ-ರಂಗವ್ಯಾಯಾಮ,-ಸ್ವರ ವ್ಯಾಯಾಮ
19. ಚಿತ್ರಕಲೆ - ಕ್ರೆಯೋನ್, ಕ್ರಿಯೆಟಿವ್ ಆರ್ಟ್, ಅಕ್ರಿಲಿಕ್, Portrait, Collage, Stencil Art
20. Origami, Chess, ಇತರ ಹತ್ತು ಕೈ ಕೆಲಸದ ಅಭ್ಯಾಸಗಳು
21. Rubik Cube-7 Types
22. ಜಗ್ಲಿಂಗ್
23. ಸುಂದರ ಅಕ್ಷರ ಬರಹ ಅಭ್ಯಾಸ (calligraphy)
24. Games Activities, Memory skill games
25. ಸಂಗೀತ ವಾದನಗಳು, ಡೋಲಕ್, ತಬ್ಲಾ, ಗಿಟಾರ್, ಕೀಬೋರ್ಡ್, ವಯೋಲಿನ್
26. ಕತೆ, ಕವನ, ಲೇಖನ, ಪತ್ರ ಸಾಹಿತ್ಯ (ಫಲಿತಾಂಶದ ಪತ್ರ)
27. Word Bank, ಪದಸಂಗ್ರಹ, ಪ್ರದರ್ಶನ ಮತ್ತು ಬಳಕೆ GK Bank, Health Bank,Wealth Bank, Skill Bank, Talent Bank ಗಳಲ್ಲಿ ವ್ಯವಹಾರಗಳು
28. 1500 ಗಿಡಮರಗಳ ವೈಜ್ಞಾನಿಕ ಹೆಸರುಗಳು.
29. ಮಾತುಗಾರಿಕೆ-(ಭಾಷಣ, ಬೋಧನೆ, ಸಲಹೆ ಹೊರತುಪಡಿಸಿ)
30. ಪುಸ್ತಕ ಓದು
31. ಸಂದರ್ಶನ ಕಲೆ
32. ಮಿಮಿಕ್ರಿ- ಬೀಟ್‌ಬಾಕ್ಸ್
33. ಮಲ್ಟಿ ಟಾಸ್ಕ್ ರೂಢಿ
34. 10 ಗುಣಗಳ ಪ್ರಜ್ಞೆ, ಜಾಗೃತಿ, ಹಸ್ತಾಂತರ ಪ್ರದರ್ಶನ
    RECEIVING, ETIQUETTE, OPENNESS, FIRST THOUGHTS, HELPING, LOVE -ENJOYMENTS RESPECT THANKS, TREATMENT, CREATIVITY, THOUGHTS
35. ಪರಿಸರ ಪ್ರೀತಿ, ಕೃಷಿ, ಸ್ವಚ್ಛತಾ ಪ್ರಜ್ಞೆ
36. ಉಪಕಾರ, ಅರ್ಪಣೆ-ಕಲಿಕೆ ಸಾಧನೆಗಳನ್ನು ಗುರುಗಳು, ಗಣ್ಯರು, ಬಂಧುಗಳಿಗೆ ಅರ್ಪಣೆ ಮಾಡಿ ಸ್ಮರಣೆಯ ಪ್ರದರ್ಶನ.
37. Nail Art,Crayon Art ಸ್ಥಳದಲ್ಲೇ, ಕ್ಷಣದಲ್ಲೇ ರಚಿಸಿ ಪ್ರದರ್ಶನ ಸಾದ್ಯತೆ ಎಲ್ಲರನ್ನೂ ಬೆರಗುಗೊಳಿಸುವಂತಾದ್ದಾಗಿದೆ.

ಇದೀಗ ಸ್ವರೂಪದ 7 ವಿದ್ಯಾರ್ಥಿಗಳಿಂದ ಈಗಾಗಲೇ 18 ವಿಶ್ವದಾಖಲೆಗಳಾಗಿವೆ.
ಪ್ರತಿಯೊಬ್ಬರೂ ಹತ್ತತ್ತು, ವಿಶ್ವದಾಖಲೆಗಳ ಅಭ್ಯಾಸದಲ್ಲಿ ನಿರತರಾಗಿದ್ದಾರೆ.
ಈಗಾಗಲೇ ಸ್ವರೂಪದ ಹಿರಿಯ ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಂದ
23 ವಿಶ್ವದಾಖಲೆಗಳು ದಾಖಲಾಗಿವೆ.

### ವಿಭಿನ್ನ ಸ್ವರೂಪ ಶಿಕ್ಷಣವನ್ನು ಹತ್ತಿರದಿಂದ ಕಂಡವರ

# ಅನುಭವದ ಪ್ರಶಂಸೆಯ ಮಾತುಗಳು

## ಸ್ವರೂಪ ವಿದ್ಯಾರ್ಥಿಗಳು ಹೆತ್ತವರು/ಅತಿಥಿಗಳು

1. ನಾನು ಶಾಲಾಕಲಿಕೆಯಲಿ ್ಲಸಾಮಾನ್ಯನಾಗಿದ್ದೆ. ಸ್ವರೂಪ ಮೆಮೊರಿ ತಂತ್ರಗಳಿಂದಲೇ ಪರೀಕ್ಷೆಗಳಲ್ಲಿ ರ್‍ಯಾಂಕ್ ತೆಗೆದೆ. ಆರು ವಿಶ್ವ ದಾಖಲೆಗಳಿಗೆ ಸ್ವರೂಪವೇ ಪ್ರೇರಣೆ. ಸ್ವರೂಪ ಶಿಕ್ಷಣ ಅದ್ಭುತ ಪ್ರತಿಭೆಯ ಕೊಡುಗೆಯ ಶಿಕ್ಷಣ.
–ಚಂದನ್ ಸುರೇಶ್, ತುಮಕೂರು. ಸ್ವರೂಪ ಹಳೆ ವಿದ್ಯಾರ್ಥಿ.

2. ಸ್ವರೂಪ ನಿಜವಾದ ಅನುಭವ ಶಿಕ್ಷಣ. ಇಲ್ಲಿ ಕಲಿಸುವ ವಿಧಾನ ಮತ್ತು ತಂತ್ರಗಳಿಂದ ಎಲ್ಲರೂ ಫೇಮಸ್ ಆದಾರು.
–ಕಶ್ಯಪ್,ಬೆಂಗಳೂರು

3. ಸ್ವರೂಪ ಶಿಕ್ಷಣ **THE BEST** ಅಂತ ಎಲ್ಲೂ ಹೇಳ್ತೇನೆ. ನಾನು ಗೆದ್ದದ್ದು ಸ್ವರೂಪದಿಂದಲೇ 8 ವಿಶ್ವದಾಖಲೆಗಳನ್ನು ಮಾಡಿದ್ದೇನೆ.
ಪರೀಕ್ಷಿತ್ ಸುಳ್ಯ–ಸ್ವರೂಪ ಹಳೆ ವಿದ್ಯಾರ್ಥಿ

4. ಸ್ವರೂಪ ಶಿಕ್ಷಣ ಬ್ರಿಲ್ಲಿಯಂಟ್ ಶಿಕ್ಷಣ. ಯಾವುದೇ ಹೊರೆಯಿಲ್ಲದ ಸಾಧನಾ ಶಿಕ್ಷಣ.
–ನವನೀತ್ ಸ್ವರೂಪ ಮಂಗಳೂರು.

5. ಯಾರೂ ಕೂಡ ಈ ಶಿಕ್ಷಣದಿಂದ ಸಾಮಾನ್ಯರಾಗಲ್ಲ. ಇದನ್ನು ಒಪ್ಪಿಕೊಂಡವರು ಗೆದ್ದ ಹಾಗೆ ಸ್ವರೂಪ ಶಿಕ್ಷಣವೇ ಮಕ್ಕಳಿಗೆ ಹಬ್ಬ –ರೋಚನಾ ಸ್ವರೂಪ ಹಾಸನ.

6. ಭಾರತದ ಶಿಕ್ಷಣ ಹೀಗಿರಬೇಕು. ಶಿಕ್ಷಣದಲ್ಲಿ ಇದು ಮಜಾ ಗಮ್ಮತ್ತು. ಟ್ಯಾಲೆಂಟ್ ನೂರಕ್ಕೆ ನೂರು ಹಾಗೂ ಮಾರ್ಕ್ಸ್ ಸುಲಭದಲ್ಲಿ ಗ್ಯಾರಂಟಿ. ಹತ್ತು ವಿಶ್ವ ದಾಖಲೆಯೂ ಗ್ಯಾರಂಟಿ. ನನ್ನ ಸ್ವರೂಪಕ್ಕೆ ಹಾಕಿದ ಅಪ್ಪ ಅಮ್ಮನಿಗೆ ಥ್ಯಾಂಕ್ಸ್. –ಜನನ್ ಸ್ವರೂಪ್ ಬೆಂಗಳೂರು.

7. ನಾನು ಮುಂದೆ ಏನಾಗ್ತೇನೆ, ಏನಾಗಬೇಕು ಅನ್ನೋದಕ್ಕೆ ಸ್ಪಷ್ಟತೆಯನ್ನು ನಂಬಿಕೆಯನ್ನು ತೋರಿಸಿಕೊಟ್ಟೇ ಸಾಧಿಸುತ್ತೇನೆ. ಆದಿಯಿಂದಲೇ ಸಾಧನೆಯ ಕಡೆಗೆ ಎಲ್ಲರನ್ನು ಕರಕೊಂಡು ಹೋಗುತ್ತೇನೆ. ಸ್ವರೂಪ ಕೊಟ್ಟ ದಾರಿಯಲ್ಲೇ ಮಾದರಿಯಾಗುತ್ತೇನೆ. –ಆದಿ ಸ್ವರೂಪ

8. ಸ್ವರೂಪ ಶಿಕ್ಷಣದ ಬಗ್ಗೆ ಒಂದು ಮಾತಿನಲ್ಲಿ ಹೇಳುವಂತದ್ದಲ್ಲ, 10 ಪುಟಗಳಲ್ಲಿ ಹೇಳುವಷ್ಟು ವಿಭಿನ್ನವಾದ ಪ್ರಯೋಗದ ಫಲಿತಾಂಶ. ಇಲ್ಲಿಂದಲೇ ನನ್ನ ಗೆಲುವು. ದೇಶಕ್ಕೇ ನಾನು ಮೋಡೆಲ್ ಆಗುವುದು ಆರಂಭ.
–ಹಿತಾ ಸುರೇಶ್, ಬೆಂಗಳೂರು

9. ಜೀರೋದಲ್ಲಿ ಇದ್ದೇನೆ, ಹೀರೋ ಆಗಿಯೇ ಆಗುತ್ತೇನೆ.
–ವರುಣ್ ಸ್ವರೂಪ ಬಾಗೆಪಳ್ಳಿ

10. ಸ್ವರೂಪದ ಮೆಮೊರಿ ಕ್ಯಾಂಪ್ ನನ್ನ ನೆನಪುಶಕ್ತಿ ಹೆಚ್ಚಿಸಿದ್ದು ಮಾತ್ರ ಅಲ್ಲ, ನನ್ನ ಬುದ್ಧಿ ಚುರುಕಾಗಿ ನನ್ನ ಹಿಡಿತಕ್ಕೆ ಸಿಕ್ಕಿತು. 10 ವಿಶ್ವದಾಖಲೆ ಸ್ವರೂಪದಿಂದ ನನ್ನ ಜಿಲ್ಲೆಗೆ ಅಪ್ಪ ಅಮ್ಮನಿಗೆ, ಶಿವಮೊಗ್ಗಕ್ಕೆ ಕೊಡುಗೆಯಾಗಿ ಕೊಡುತ್ತೇನೆ.
–ಪ್ರಸನ್ನ ಸ್ವರೂಪ, ಶಿವಮೊಗ್ಗ

11. ಬನ್ನಿ ಬನ್ನಿ ಎಲ್ಲಾ ಶಾಲೆಯವರು ಸ್ವರೂಪ ಶಿಕ್ಷಣ ಕೇಂದ್ರಕ್ಕೆ ಶಿಕ್ಷಣ ಹೇಗಿರಬೇಕೆಂದು ತಿಳಿದುಕೊಳ್ಳಿ.ಬನ್ನಿ ಅಂತ ಕಿರುಚಿ ಹೇಳಿಕೊಂಡು ತಿರುಗಾಡಬೇಕು ಅಂತ ಅನಿಸುತ್ತದೆ. ಈ ವರ್ಷವೇ 10 ವಿಶ್ವದಾಖಲೆ ಸಾಧನೆಯನ್ನು ಮಾಡ್ತೇನೆ. ನನ್ನ ಭವಿಷ್ಯ ಯಾರೂ ಲೂಟಿ ಮಾಡಿಲ್ಲ.–ಕಾವ್ಯ ಸ್ವರೂಪ ಸುಳ್ಯ.

13. ಸ್ವರೂಪಕ್ಕೆ ನಾನು ಕಲಿಯಲು ಬಂದದ್ದು ಅಪ್ಪ ಅಮ್ಮನ ಧೈರ್ಯದ ಕೊಡುಗೆ. ಪಾಪ ಎಷ್ಟು ಕೋಟಿ ಮಕ್ಕಳು ಕಲಿಯದವರ ಜೊತೆಗೆ ಸಾಮರ್ಥ್ಯ ಇಲ್ಲದವರ ಸಾಧಕರಲ್ಲದವರು ಜೊತೆಗಿದ್ದಾರೆ. ಇದು ಸಾಧಕರ ಸೃಷ್ಠಿ ಕೇಂದ್ರ. ಒಂದೆರಡು ವಿಶ್ವದಾಖಲೆಗೆ ಭಾರೀ ಪ್ರಶಂಸೆ ಸಿಕ್ಕಿದೆ. ಹತ್ತಾರು ದಾಖಲೆ ಮಾಡದಿರಲಾರೆ.
–ಸ್ವರೂಪ ಅನ್ವೇಶ್ ಅಂಬೆಕಲ್ಲು

14. ಇಂತಹ ಶಿಕ್ಷಣ ಸ್ವರೂಪದಲ್ಲಿ ಹೊರತು ದೇಶದಲ್ಲಿ ಎಲ್ಲೂ ಇರಲಿಕ್ಕಿಲ್ಲ. ನಾನು ಹತ್ತು ವಿಶ್ವದಾಖಲೆ ಮಾಡಿ. **Famous** ಆದರೆ ಸ್ವರೂಪದಿಂದಲೇ. ಶ್ರವಣ್ ಸ್ವರೂಪ, ವಿಜಯಪುರ.

15. ನನ್ನ ಬದಲಾವಣೆಗೆ ನನ್ನ ಸ್ವರೂಪ ನಿರ್ಧಾರಗಳೇ ಕಾರಣ ಅಂತ ಸ್ವರೂಪದೊಳಗಿದ್ದ ನನಗೆ ಗೊತ್ತಾಗಿದ್ದೇ ಲಾಭ. ಮಕ್ಕಳನ್ನು ಸಾಧಕರನ್ನಾಗಿಸುವ ನೆನಪು ಶಕ್ತಿಯ ಶಿಕ್ಷಣ ಮತ್ತು ತಾವೇ ಕಲಿವಂತೆ ಬದಲಾಗುವಂತೆ ಮಾಡುವ ಮನೋವಿಜ್ಞಾನ ಶಿಕ್ಷಣವೇ ಸ್ವರೂಪದ ಮೂಲಶಕ್ತಿ.
–ಗೋವಿಂದಭಟ್ ಸ್ವರೂಪ ಕಛೇರಿ

1. ಈ ದೇಶದಲ್ಲಿ ಸ್ವರೂಪ ಶಿಕ್ಷಣವನ್ನು ಎಲ್ಲರೂ ಕಾಣಬೇಕು. ಇದನ್ನು ಎಲ್ಲರೂ ಒಪ್ಪಿಕೊಳ್ಳುವಷ್ಟು ಚಂದ ಇದೆ. ದೇಶದ ಶಿಕ್ಷಣಕ್ಕೆ ಇದು ವಿನೂತನ ಕೊಡುಗೆ. ಸರಕಾರ ಇದನ್ನು ಗಮನಿಸಬೇಕು.
ಭಾರತಿ. ಮಂಗಳೂರು, ಪೋಷಕರು

2. ಮಕ್ಕಳು ಇನ್ನು ಮುಂದೆ ಯಾರೂ. ಸಾಮರ್ಥ್ಯದಲ್ಲಿ ವಂಚನೆಗೆ ಒಳಗಾಗಲ್ಲ ಅಂತ ಇಲ್ಲಿ ಕಲಿಯುವ ಮಕ್ಕಳನ್ನು ಕಂಡಾಗಲೇ ಗೊತ್ತಾದದ್ದು. – ಮಣಿ ಹಾಸನ, ಶಿಕ್ಷಕರು ಪೋಷಕರು

4. ಸ್ವರೂಪ ಶಿಕ್ಷಣ ಬಹಳ ಕಾಲದ ಸಂಶೋಧನೆಯ ಫಲ. ಖಂಡಿತಾ ಇದು ಶಿಕ್ಷಣದ ಸಾಧ್ಯತೆಗಳಲ್ಲಿ ಹಲವು ವಿಭಾಗಗಳಲ್ಲಿ ನಿಜ ಕ್ರಾಂತಿಯನ್ನೇ ಮಾಡಲಿದೆ.
–ಕವಿತಾ ಶಿಶೀರ, ಟೀಚರ್–ಸ್ಟುಡೆಂಟ್ ಸ್ವರೂಪ

9. ಮಗುವಿನೊಳಗೆ ಅಗಾಧ ಸಾಧ್ಯತೆಗಳಿರುತ್ತವೆ. ಕಲಿಕೆಯ ಮಿತಿಯನ್ನು ಮೀರಿ ಚಿಂತಿಸಿ, ಮುಕ್ತ ವಾತಾವರಣದ ಅವಕಾಶಗಳನ್ನು ನೀಡುತ್ತಾ ಸಾಗಿದರೆ ಮಗು ಅಪ್ರತಿಮ ಸಾಧಕನಾಗಬಹುದು ಎಂಬುದನ್ನು ಸ್ವರೂಪ ಶಿಕ್ಷಣ ಸಾಬೀತುಮಾಡಿದೆ. –ಹರಿಣಾಕ್ಷಿ ಟೀಚರ್, ಗುತ್ತಿಗಾರು ಸುಳ್ಯ

10. ಜಡ್ಡುಗಟ್ಟಿದ ಮನದ ಭಾವನೆ ಗಳಿಗೆ ಹೊಸ ಹುರುಪು ನೀಡಿ, ಕಳೆದುಕೊಳ್ಳುತ್ತಿದ್ದ ನಮ್ಮ ಪ್ರೀತಿ, ಮಮತೆ, ಕಾಳಜಿಗಳಿಗೆ ಹೊಸ ರೂಪ ನೀಡಿ, ನಿರಂತರ ಕಲಿಕೆಯ ಕಡೆಗೆ ಹೆಜ್ಜೆ ಹಾಕಲು ಸ್ಫೂರ್ತಿ ನೀಡಿದ 'ಸ್ವರೂಪ'...ಪೂರ್ಣಿಮ ಟೀಚರ್ ಸುಳ್ಯ.

12. ಇದು ಬದುಕಿನ ಶಿಕ್ಷಣ. ಎಂತಹ ಕಠಿಣ ಪರಿಸ್ಥಿತಿ ಬಂದಾಗ ಎಲ್ಲವನ್ನೂ ತಾಳ್ಮೆಯಿಂದ ಎದುರಿಸಿ ಬದುಕಲು ದಾರಿ ತೋರಿಸುವ ಶಕ್ತಿ ಸ್ವರೂಪ ಶಿಕ್ಷಣದಲ್ಲಿದೆ.
–ಶ್ರೀಜಾ ಕಿಶೋರ್, ಸ್ವರೂಪ ಕಚೇರಿ ಸಹಾಯಕಿ

Watch YouTube
• Aadi Swaroopa • Swaroopa Adhyayana Kendra
• Gopadkar • Swaroopa Study Tour
Web : www.swaroopaadhyayanakendra.com



# 2010–2019 ರವರೆಗೆ ನಡೆದ ಸ್ವರೂಪ ಶಿಕ್ಷಣ ಜಾಗೃತಿ ಜಾಥಾ ರಾಜ್ಯಾದ್ಯಂತ 1600 ಕೇಂದ್ರಗಳಲ್ಲಿ ಪ್ರದರ್ಶನ ವೀಕ್ಷಿಸಿದವರ ಸಂಖ್ಯೆ 6 ಲಕ್ಷದ 50 ಸಾವಿರ



Audience-in-Kuvempu-Ranga-Mandir



Audience-at-Siddaganga



D.C.-giving-opinion-after-watching-whole-prog







Gopadkar-was-felicitated-by-B.E.O.Ramnath-Suresh











Audience-at-Siddaganga Mutt

